ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ದೇವಿಕಾ ಸಿಹಾಗ್ ಅವರು ಭಾನುವಾರ ಥಾಯ್ಲೆಂಡ್ ಮಾಸ್ಟರ್ಸ್ ಫೈನಲ್ ಪಂದ್ಯ ಜಯಿಸಿ ಚೊಚ್ಚಲ ಕಿರೀಟ ಮುಡಿಗೇರಿಸಿಕೊಂಡ ಕ್ಷಣ

02 ಫೆಬ್ರವರಿ 2026 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 319 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಕೆಸರಿನ ಜನರ ನಡುವೆ » 2



ನಿವೇಶನ ವಿವಾದ ಸಂಬಂಧ ಯಶ್ ತಾಯಿ ಮತ್ತೆ ರಂಪಾಟ » 3



ಅದ್ದೂರಿ ಅಡಿಬೈಲು ಶ್ರೀ ರಂಗನಾಥ ಸ್ವಾಮಿ ಜಾತ್ರಾ ಮಹೋತ್ಸವ » 4

## ಕೇಂದ್ರ ಬಜೆಟ್

# ಚುನಾವಣಾ ರಾಜ್ಯಗಳಿಗೆ ಸಿಂಹಪಾಲು



- ಆರ್ಥಿಕ ಶಿಸ್ತು ಪಾಲನೆ ಎಂದ ಕೇಂದ್ರ ಸರ್ಕಾರ
- ರಾಜ್ಯಕ್ಕೆ ಹೈ ಸ್ಪೀಡ್ ರೈಲು ಕಾರಿಡಾರ್

• ಪ್ರಜೋದಯ ವರದಿ

**ನವದೆಹಲಿ : ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕ ಸಭೆಯಲ್ಲಿ ಭಾನುವಾರ ದಾಖಲೆಯ 9ನೇ ಬಜೆಟ್ ಮಂಡಿಸಿದ್ದು, ವಿಧಾನಸಭೆ ಚುನಾವಣೆ ನಡೆಯಲಿರುವ ರಾಜ್ಯಗಳಿಗೆ ಆದ್ಯತೆ ದೊರೆತಿದೆ.**

### ಪ್ರಮುಖ ಇಲಾಖೆಗಳಿಗೆ ಅನುದಾನ (ಕೋ.ರೂ.ಗಳಲ್ಲಿ)

- ಸಾರಿಗೆ: 5,98,520 ಕೋ.ರೂ.
- ರಕ್ಷಣೆ: 5,94,585 ಕೋ.ರೂ.
- ಗ್ರಾಮೀಣಾಭಿವೃದ್ಧಿ: 2,73,108 ಕೋ.ರೂ.
- ಗೃಹ ವ್ಯವಹಾರ: 2,55,234 ಕೋ.ರೂ.
- ಕೃಷಿ: 1,62,671 ಕೋ.ರೂ.
- ಶಿಕ್ಷಣ: 1,39,289 ಕೋ.ರೂ.
- ಆರೋಗ್ಯ: 1,04,599 ಕೋ.ರೂ.
- ಇಂಧನ: 1,09,029 ಕೋ.ರೂ.
- ನಗರಾಭಿವೃದ್ಧಿ: 85,522 ಕೋ.ರೂ.
- ಐಟಿ ಮತ್ತು ಟೆಲಿಕಾಂ: 74,560 ಕೋ.ರೂ.
- ವಾಣಿಜ್ಯ ಮತ್ತು ಕೈಗಾರಿಕೆ: 70,296 ಕೋ.ರೂ.
- ಸಮಾಜ ಕಲ್ಯಾಣ: 62,362 ಕೋ.ರೂ.
- ವೈಜ್ಞಾನಿಕ ಇಲಾಖೆ: 55,756 ಕೋ.ರೂ.
- ತೆರಿಗೆ ಆಡಳಿತ: 45,500 ಕೋ.ರೂ.
- ವಿದೇಶಾಂಗ ವ್ಯವಹಾರ: 22,119 ಕೋ.ರೂ.
- ಹಣಕಾಸು: 20,649 ಕೋ.ರೂ.
- ಈಶಾನ್ಯ ರಾಜ್ಯಗಳ ಅಭಿವೃದ್ಧಿ: 6,812 ಕೋ.ರೂ.

ಏಪ್ರಿಲ್‌ನಲ್ಲಿ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಮತದಾನ ನಡೆಯಲಿದ್ದು, ನಿರೀಕ್ಷೆಯಂತೆ ಈ ರಾಜ್ಯಗಳು ಬಜೆಟ್‌ನಲ್ಲಿ ಸಿಂಹಪಾಲು ಪಡೆದುಕೊಂಡಿವೆ. ಒಡಿಶಾ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಂತಹ ಖನಿಜ ಸಮೃದ್ಧ ರಾಜ್ಯಗಳನ್ನು ಗಮನದಲ್ಲಿರಿಸಿಕೊಂಡು ಅಪರೂಪದ ಭೂ ಕಾರಿಡಾರ್ ಸ್ಥಾಪಿಸುವುದಾಗಿ ಸಚಿವೆ ನಿರ್ಮಲಾ ಅವರು ಘೋಷಣೆ ಮಾಡಿದ್ದಾರೆ. ಈ ಕಾರಿಡಾರ್‌ಗಳು ಖನಿಜ ಗಣಿಗಾರಿಕೆ, ಸಂಸ್ಕರಣೆ, ಸಂಶೋಧನೆ ಮತ್ತು ಉತ್ಪಾದನೆಯ ಮೇಲೆ ಗಮನ ಕೇಂದ್ರೀಕರಿಸುತ್ತವೆಂದರು.

2025ರ ನವೆಂಬರ್‌ನಲ್ಲಿ ಆಯಸ್ಕಾಂತದಂತಹ ಶಾಶ್ವತ ಭೂ ಖನಿಜ ಯೋಜನೆ ಪ್ರಾರಂಭಿಸಿದ ನಂತರ, ಉತ್ಪಾದನಾ ವಲಯದಲ್ಲಿ ಭಾರತದ ಸಾಮರ್ಥ್ಯವನ್ನು ಬಲಪಡಿಸುವ ಗುರಿ ಹೊಂದಿದೆ ಎಂದಿದ್ದಾರೆ. ಉತ್ತರ ಭಾರತದ ರಾಜ್ಯಗಳಲ್ಲಿ ಸುರಕ್ಷಿತ ಮತ್ತು ಸುಸ್ಥಿರ ಚಾರಣ ಹಾಗು ಪಾದಯಾತ್ರೆಯ ಹಾದಿಗಳನ್ನು ಸ್ಥಾಪಿಸಲು ಸರ್ಕಾರ ಯೋಜಿಸಿದೆ. ಅಲ್ಲದೆ, ಅವರು ಒಡಿಶಾ, ಕರ್ನಾಟಕ ಮತ್ತು ಕೇರಳದ ಪ್ರಮುಖ ಆಮೆ ಗೂಡುಕಟ್ಟುವ ಹಾದಿಗಳನ್ನು ಹಾಗು ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಪುಲಿಕಾಟ್ ಸರೋವರದ ಉದ್ದಕ್ಕೂ ಪಕ್ಷಿ ವೀಕ್ಷಣಾ ಹಾದಿಗಳನ್ನು ರಚಿಸಲು ಯೋಜನೆ ರೂಪಿಸುತ್ತಿರುವುದಾಗಿ ತಿಳಿಸಿದ್ದಾರೆ.

ತಮಿಳುನಾಡು, ಪಶ್ಚಿಮ ಬಂಗಾಳ ಸಂಪರ್ಕಿಸುವ ನಗರಗಳು, ಮುಂಬೈ-ಪುಣೆ, ಪುಣೆ-ಹೈದರಾಬಾದ್, ಹೈದರಾಬಾದ್-ಬೆಂಗಳೂರು, ಹೈದರಾಬಾದ್-ಚೆನ್ನೈ, ಚೆನ್ನೈ-ಬೆಂಗಳೂರು, ದೆಹಲಿ-ವಾರಣಾಸಿ ಮತ್ತು ವಾರಣಾಸಿ-ಸಿಲಿಗುರಿಗಳನ್ನು ಸಂಪರ್ಕಿಸುವ ನಗರಗಳ ನಡುವೆ ಹೈಸ್ಪೀಡ್ ರೈಲು ಕಾರಿಡಾರ್‌ಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಯೋಜಿಸಿದೆ ಎಂದು ಸೀತಾರಾಮನ್ ಮಾಹಿತಿ ನೀಡಿದ್ದಾರೆ.

> ಕಳೆದ 12 ವರ್ಷಗಳಲ್ಲಿ ಅನಿಶ್ಚಿತತೆಗಳ ಹೊರತಾಗಿಯೂ ನಾವು ಸ್ಥಿರವಾದ ಆರ್ಥಿಕತೆ ಕಾಯ್ದುಕೊಂಡಿದ್ದೇವೆ. ದೂರಗಾಮಿ ರಚನಾತ್ಮಕ ಸುಧಾರಣೆ, ಸ್ವಾವಲಂಬನೆಯನ್ನು ಕಾಪಾಡಿಕೊಳ್ಳಲಾಗಿದೆ. ಆಮದುಗಳ ಮೇಲಿನ ಅವಲಂಬನೆ ತಗ್ಗಿಸಲು ಹಲವು ಕ್ರಮ ಕೈಗೊಳ್ಳಲಾಗಿದೆ. ಭಾರತವು ಆತ್ಮವಿಶ್ವಾಸದ ಹೆಜ್ಜೆಗಳನ್ನು ಇಡುವುದನ್ನು ಮುಂದುವರಿಸುತ್ತದೆ. ವಿಶ್ವದ ಅತಿದೊಡ್ಡ ಆರ್ಥಿಕತೆಯಾಗುವ ನಮ್ಮ ಪ್ರಯಾಣದಲ್ಲಿ ನಮ್ಮೊಂದಿಗೆ ನಿಂತಿದ್ದಕ್ಕಾಗಿ ಜನರಿಗೆ ಧನ್ಯವಾದ ಹೇಳುತ್ತೇನೆ.
>
> -ನಿರ್ಮಲಾ ಸೀತಾರಾಮನ್, ಕೇಂದ್ರ ವಿತ್ತ



> ಈ ಬಾರಿಯ ಕೇಂದ್ರ ಬಜೆಟ್ 140 ಕೋಟಿ ಭಾರತೀಯರ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ಮೂಲಕ ವಿಕಸಿತ ಭಾರತ ನಿರ್ಮಾಣಕ್ಕೆ ಸ್ಪಷ್ಟ ಮಾರ್ಗಸೂಚಿ ಒದಗಿಸುತ್ತದೆ. ಬಂಡವಾಳ ಹೂಡಿಕೆ ಹಾಗು ಅಭಿವೃದ್ಧಿಗೆ ಪೂರಕ ಬಜೆಟ್ ಇದಾಗಿದೆ. ಎಲ್ಲರೂ ಒಟ್ಟಾಗಿ ದೇಶದ ಪ್ರಗತಿಗೆ ಶ್ರಮಿಸೋಣ.
>
> -ನರೇಂದ್ರ ಮೋದಿ, ಪ್ರಧಾನಿ

### ಜಿಲ್ಲೆಯ ಜನರ ನಿರೀಕ್ಷೆ ಹುಸಿಗೊಳಿಸಿದ ಬಜೆಟ್

ಹಾಸನ: ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆ.1ರ ಭಾನುವಾರ ಕೇಂದ್ರ ಬಜೆಟ್ ಮಂಡಿಸಿದ್ದು ಜಿಲ್ಲೆಗೆ ಯಾವುದೇ ವಿಶೇಷ ಯೋಜನೆಗಳು ಘೋಷಣೆಯಾಗದೆ ನಿರಾಸೆ ಮೂಡಿಸಿದೆ.

ಎನ್‌ಡಿಎ ಮೈತ್ರಿಕೂಟದಲ್ಲಿ ಜೆಡಿಎಸ್ ಮಹತ್ವದ ಪಾತ್ರ ವಹಿಸಿರುವುದು ಮಾತ್ರವಲ್ಲದೆ ಜಿಲ್ಲೆಯವರೇ ಆಗಿರುವ ಹೆಚ್.ಡಿ.ಕುಮಾರಸ್ವಾಮಿ ಮಂತ್ರಿಯಾಗಿರುವುದು ಹಾಗು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಜೊತೆಗೆ ಉತ್ತಮ ಬಾಂಧವ್ಯ ಹೊಂದಿರುವುದರಿಂದ ಐಐಟಿ, ಆನೆ ಕಾರಿಡಾರ್, ರಾಜ್ಯ ಹೆದ್ದಾರಿಗಳು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರುವ ಅವಕಾಶ ಒದಗಿ ಬರಲಿದೆ ಎಂಬ ಆಶಾಭಾವ ಮೂಡಿತ್ತು. ಸಂಸದ ಶ್ರೇಯಸ್ ಪಟೇಲ್ ಸಹ ಜಿಲ್ಲೆಯ ಅಭಿವೃದ್ಧಿ ಸಂಬಂಧ ತಮ್ಮದೇಯಾದ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಆದರೆ, ಜಿಲ್ಲೆಗೆ ಯಾವುದೇ ಯೋಜನೆಗಳು ಘೋಷಣೆಯಾಗದೆ ಇರುವುದು ಸಹಜವಾಗಿ ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಐಐಟಿ ನಿರ್ಮಾಣಕ್ಕಾಗಿ 1057 ಎಕರೆ ಜಾಗ ಸ್ವಾಧೀನಪಡಿಸಿಕೊಂಡಿರುವುದು ಮಾತ್ರವಲ್ಲದೆ ಅದಕ್ಕಾಗಿ ಅಗತ್ಯ ತಯಾರಿಯನ್ನು ಮಾಡಿಕೊಳ್ಳಲಾಗಿದೆ. 2013ರಲ್ಲಿ ವಿಶೇಷ ತಂಡ ಸ್ಥಳ ಪರಿಶೀಲನೆ ನಡೆಸಿ ಅಂತಿಮ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಿದೆ. ಜೊತೆಗೆ ಮಲೆನಾಡು ಭಾಗದಲ್ಲಿ ಹೆಚ್ಚಿರುವ ಕಾಡಾನೆ ಮಾನವ ಸಂಘರ್ಷ ತಡೆಗೆ ಪರಿಹಾರ ಸಿಗಬಹುದೆಂಬ ನಿರೀಕ್ಷೆ ಮತ್ತೆ ಹುಸಿಯಾಗಿದೆ. ವಿಶ್ವ ಪ್ರಸಿದ್ಧ ಪ್ರವಾಸಿ ತಾಣಗಳ ಅಭಿವೃದ್ಧಿಗೂ ಕೇಂದ್ರ ಗಮನ ಹರಿಸಿಲ್ಲ.

#### ಬೌದ್ಧ ಸರ್ಕೀಟ್‌ಗಳ ಅಭಿವೃದ್ಧಿ

ಅರುಣಾಚಲ ಪ್ರದೇಶ, ಸಿಕ್ಕಿಂ, ಅಸ್ಸಾಂ, ಮಣಿಪುರ, ಮಿಜೋರಾಂ ಮತ್ತು ತ್ರಿಪುರಗಳಲ್ಲಿ ಬೌದ್ಧ ಸರ್ಕೀಟ್‌ಗಳ ಅಭಿವೃದ್ಧಿಗಾಗಿ ವಿಶೇಷ ಯೋಜನೆ ಒಂದನ್ನು ಪ್ರಾರಂಭಿಸಲು ಸರ್ಕಾರ ಪ್ರಸ್ತಾಪಿಸಿರುವುದಾಗಿಯೂ ತಿಳಿಸಿದ್ದಾರೆ.

ಆರ್ಥಿಕ ಬೆಳವಣಿಗೆಗೆ ವೇಗ ನೀಡುವುದು ಸರ್ಕಾರದ ಕರ್ತವ್ಯ. ಜೊತೆಗೆ ಬಡವರು, ದೀನದಲಿತರು ಮತ್ತು ಬಡತನ ರೇಖೆಗಿಂತ ಕೆಳಗಿನವರ ಮೇಲೆ ಕೇಂದ್ರೀಕರಿಸುವುದು ಇದರ ಉದ್ದೇಶವೆಂದು ನಿರ್ಮಲಾ ಸೀತಾರಾಮನ್ ಹೇಳಿದರು.

#### ವಿಬಿ-ಜಿ-ರಾಮ್-ಜಿಗೆ ಅತ್ಯಧಿಕ ಹಣ

ಹೆಸರು ಬದಲಾವಣೆಯಿಂದ ಹೆಚ್ಚು ಚರ್ಚೆಗೆ ಒಳಗಾದ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಬದಲಾದ ಸ್ವರೂಪ (ಮನರೇಗಾ) ವಿಬಿಜಿ ರಾಮ್ ಜಿ ಗೆ ಕೇಂದ್ರದ ಬಜೆಟ್‌ನಲ್ಲಿ ಹೆಚ್ಚಿನ ಹಣ ಕಾಯ್ದಿರಿಸಲಾಗಿದೆ. ಸದ್ಯ ಈ ಯೋಜನೆ ಹೊಸ ರೂಪದಲ್ಲಿ ಇನ್ನು ಅನುಷ್ಠಾನಗೊಂಡಿಲ್ಲ. ಅಲ್ಲಿಯವರೆಗೂ ಬಾಕಿ ಕಾಮಗಾರಿ, ಕೆಲಸಗಳು ಮನರೇಗಾ ಯೋಜನೆ ಹೆಸರಿನಲ್ಲಿಯೇ ಮುಂದುವರೆಯಲಿವೆ. ಒಕ್ಕೂಟ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ವಿಬಿಜಿ ರಾಮ್ ಜಿ ಯೋಜನೆಗೆ ಈ ಸಾರಿಯ ಬಜೆಟ್‌ನಲ್ಲಿ 95,692 ಕೋ. ರೂ. ಹಣ ಮೀಸಲಿಟ್ಟಿದ್ದಾರೆ. 202526ನೇ ಸಾಲಿನ ಬಜೆಟ್‌ನಲ್ಲಿ 88 ಸಾವಿರ ಕೋ. ರೂ. ತೆಗೆದಿರಿಸಲಾಗಿತ್ತು. ಆದರೆ, ಹಂಚಿಕೆಯಾಗಿದ್ದು 86 ಸಾವಿರ ಕೋ.ರೂ. ಒಟ್ಟಾರೆ ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಈ ಸಾರಿ 1.86 ಲಕ್ಷ ಕೋ. ರೂ. ಹಂಚಿಕೆಯಾಗಿದೆ. ವಿಬಿಜಿ ರಾಮ್ ಜಿ ಯೋಜನೆಯ ಹಂಚಿಕೆಯಾದ 95,692 ಕೋ.ರೂ. ಹಣದಲ್ಲಿ ಬಾಕಿ ಇರುವ ಮನರೇಗಾ ಯೋಜನೆಯ ಕಾಮಗಾರಿ, ಕೆಲಸಗಳಿಗೆ 30 ಸಾವಿರ ಕೋ.ರೂ. ಮೀಸಲಿದೆ. ಕಳೆದ ಸಾರಿಯ ಬಜೆಟ್‌ಗಿಂತ ಈ ಸಾರಿ ಸುಮಾರು 10 ಸಾವಿರ ಕೋ. ರೂ. ಹೆಚ್ಚು ಹಣವನ್ನು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಒದಗಿಸಿದರೂ ಹೊಸ ನಿಯಮಾವಳಿಗಳ ಪ್ರಕಾರ ನಿಗದಿತ ರಾಜ್ಯಗಳ ಮೇಲೆ ಹೆಚ್ಚಿನ ಹೊರೆ ಬೀಳಲಿದೆ ಎನ್ನಲಾಗಿದೆ.

ವಿಬಿಜಿ ರಾಮ್ ಜಿ ಯೋಜನೆಯಲ್ಲಿ ಈಶಾನ್ಯ ರಾಜ್ಯಗಳು, ಹಿಮಾಲಯನ್ ರಾಜ್ಯಗಳನ್ನು ಹೊರತು ಪಡಿಸಿ 60:40 ಅನುಪಾತದಲ್ಲಿ (60 ಭಾಗ ಕೇಂದ್ರ, 40 ಭಾಗ ರಾಜ್ಯ) ವೆಚ್ಚ ಮಾಡಬೇಕಾಗುತ್ತದೆ. ಮೊದಲು ಇದು 90:10 ರಷ್ಟಿತ್ತು. ಈಗ ಈಶಾನ್ಯ ರಾಜ್ಯಗಳು ಹಾಗು ಹಿಮಾಲಯನ್ ರಾಜ್ಯಗಳು ಮಾತ್ರ ಶೇ.10 ಖರ್ಚು ಮಾಡಬೇಕಾಗುತ್ತದೆ. ಗ್ರಾಮೀಣಾಭಿವೃದ್ಧಿ ಸಚಿವಾಲಯದಲ್ಲಿ ಹಂಚಿಕೆಯಾಗಿರುವ ಹಣದಲ್ಲಿ ಸುಮಾರು ಶೇ.50 ರಷ್ಟು ಉದ್ಯೋಗ ಖಾತ್ರಿ ಯೋಜನೆಗಾಗಿಯೇ ಖರ್ಚಾಗುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

## ತೆರಿಗೆ ಪಾಲು ಹಂಚಿಕೆ-ಟೀಕೆಗೆ ಉತ್ತರ: ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ



**ನವದೆಹಲಿ:** ಕೇಂದ್ರ ಹಣಕಾಸು ಖಾತೆ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ 2026-27ನೇ ಸಾಲಿನ ಆಯವ್ಯಯದ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ಟೀಕೆಗಳಿಗೆ ಉತ್ತರ ಕೊಡಲಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

ತೆರಿಗೆ ಪಾಲಿನಲ್ಲಿ ಅನ್ಯಾಯ ಆಗಿದೆ ಎಂದು ರಾಜ್ಯ ಸರ್ಕಾರ ಸಾಮಾನ್ಯವಾಗಿ ದೂರುತ್ತಿತ್ತು. 16ನೇ ಹಣಕಾಸು ಆಯೋಗ ಕರ್ನಾಟಕಕ್ಕೆ ಶೇ.4.13ರಷ್ಟು ತೆರಿಗೆ ಪಾಲು ಹಂಚಿಕೆಗೆ ಶಿಫಾರಸು ಮಾಡಿದೆ. 15ನೇ ಹಣಕಾಸು ಆಯೋಗವು ಶೇ.3.64 ಹಂಚಿಕೆ ಮಾಡಿತ್ತು. ಹೊಸದಾಗಿ ಹಂಚಿಕೆ ಆಗಿರುವುದರ ಮೂಲಕ ರಾಜ್ಯಕ್ಕೆ 2026-27ನೇ ಸಾಲಿನಲ್ಲಿ 63,049 ಕೋ.ರೂ. ತೆರಿಗೆ ಪಾಲು ದೊರೆಯಲಿದೆ. ಇನ್ನು ಮುಂದೆ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ರಾಜಕೀಯವಾಗಿ ಕೇಂದ್ರವನ್ನು ಟೀಕೆ ಮಾಡುವುದನ್ನು ಬಿಡಬೇಕೆಂದು ಹೇಳಿದ್ದಾರೆ.

ಈ ಬಜೆಟ್ ನಲ್ಲಿ ಕರ್ನಾಟಕಕ್ಕೆ ನಿರಾಶೆಯೇನೂ ಆಗಿಲ್ಲ. ತೆಂಗು ಪ್ರೋತ್ಸಾಹ ಯೋಜನೆಯಡಿ ತೆಂಗಿನ ಉತ್ಪಾದನೆ ಹೆಚ್ಚಳಕ್ಕೆ ಉತ್ತೇಜನ ಕೊಡಲಾಗಿದೆ. ಗೋಡಂಬಿ ಮತ್ತು ಕೋಕೋವನ್ನು 2030ರ ವೇಳೆಗೆ ಪ್ರೀಮಿಯಂ ಗ್ಲೋಬಲ್ ಬ್ರಾಂಡ್ ಆಗಿ ರೂಪಿಸುವ ಅಂಶವು ಸೇರಿದೆ. ಹೈದರಾಬಾದ್-ಬೆಂಗಳೂರು, ಬೆಂಗಳೂರು-ಚೆನ್ನೈ ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆ ರಾಜ್ಯಕ್ಕೆ ವರದಾನವಾಗಲಿದೆ. ಈಗಾಗಲೇ ರಾಜ್ಯದ ಹಲವು ವೇಗದ ರೈಲುಗಳು ಕಾರ್ಯಾಚರಿಸುತ್ತಿದ್ದು, ವಂದೇ ಭಾರತ್ ರೈಲುಗಳು ಕೂಡ ಸೇರ್ಪಡೆಯಾಗಿದೆ. ಈಗ ಹೈ ಸ್ಪೀಡ್ ರೈಲುಗಳು ರಾಜ್ಯಕ್ಕೆ ಬರುತ್ತಿರುವ ಹಿನ್ನಲೆಯಲ್ಲಿ ರೈಲು ಸಂಪರ್ಕದಲ್ಲಿ ಹೊಸ ಕ್ರಾಂತಿ ಆಗಲಿದೆ ಎಂದು ಸಚಿವರು ಪ್ರತಿಪಾದಿಸಿದರು.


ಇದು ಕೇವಲ ಅಂಕಿ ಅಂಶಗಳ ಮುಂಗಡ ಪತ್ರವಲ್ಲ, ಬದಲಿಗೆ ಮುನ್ನೋಟ, ಮುಂದಾಲೋಚನೆ, ವಿಕಾಸ, ಫಲಿತಾಂಶ ಆಧರಿತ ಮುಂಗಡ ಪತ್ರವಾಗಿದೆ. ವಿಕಸಿತ ಭಾರತ ಗುರಿ ಸಾಕಾರಕ್ಕೆ ಇದು ಪೂರಕವಾಗಿದೆ. 2047ಕ್ಕೆ ನಾವು ಈ ಗುರಿ ಸಾಧನೆ ಮಾಡಬೇಕು, ಅದಕ್ಕೆ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಈ ಬಜೆಟ್ ಸ್ಪಷ್ಟ ದಿಕ್ಸೂಚಿ ತೋರಿದೆ ಎಂದು ಅವರು ಹೇಳಿದ್ದಾರೆ.

### ಬಾಂಗ್ಲಾದೇಶಕ್ಕೆ ಭಾರತ ಬಿಗ್ ಶಾಕ್

ಭಾರತ ತನ್ನ ವಿದೇಶಿ ನೆರವಿನಲ್ಲಿ ಸಾಕಷ್ಟು ಬದಲಾವಣೆ ಮಾಡಿದ್ದು, ಬಾಂಗ್ಲಾದೇಶಕ್ಕೆ ಅರ್ಧದಷ್ಟು ನೆರವನ್ನು ಕಡಿತಗೊಳಿಸಿದೆ. ವಿದೇಶಗಳಿಗೆ ನೆರವು ಯೋಜನೆಯಡಿ ಕಳೆದ ವರ್ಷದ ಬಜೆಟ್‌ನಲ್ಲಿ ನೀಡಲಾಗಿದ್ದ 5,483 ಕೋ.ರೂ.ಗಿಂತ ಶೇ. 4ರಷ್ಟು ಹೆಚ್ಚಳ ಅಂದರೆ, 5,686 ಕೋ.ರೂ.ಗೆ ಹೆಚ್ಚಿಸಲಾಗಿದೆ. ಆದರೆ, 2025-2026ರ ಪರಿಷ್ಕೃತ ಅಂದಾಜು 5,785 ಕೋ.ರೂ.ಗಿಂತ ಸುಮಾರು 100 ಕೋ.ರೂ. ಕಡಿಮೆ ಹಣ ಮೀಸಲಿಡಲಾಗಿದೆ.

ಬಾಂಗ್ಲಾದೇಶಕ್ಕೆ ಮೀಸಲಿಟ್ಟ ಹಣವನ್ನು 120 ರಿಂದ 60 ಕೋ. ರೂ.ಗೆ ಕಡಿತ ಮಾಡಲಾಗಿದೆ. ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಹದಗೆಡುತ್ತಿರುವಂತೆಯೇ ಇತರ ನೆರೆಯ ರಾಷ್ಟ್ರಗಳಿಗೆ ನೆರವನ್ನು ಹೆಚ್ಚಿಸಿದ್ದರೂ ಬಾಂಗ್ಲಾದೇಶಕ್ಕೆ ಕಡಿತ ಮಾಡಲಾಗಿದೆ. ಭೂತಾನ್‌ಗೆ ಶೇ. 6 (2,289 ಕೋ.ರೂ.), ನೇಪಾಳಕ್ಕೆ ಶೇ.14 (800 ಕೋ.ರೂ.), ಶ್ರೀಲಂಕಾಕ್ಕೆ 400 ಕೋ.ರೂ. ಹೆಚ್ಚಳ ಮಾಡಲಾಗಿದೆ. ಮಾಲ್ಡೀವ್ಸ್‌ಗೆ ಶೇ.8 ರಷ್ಟು ನೆರವು ಕಡಿತಗೊಳಿಸಲಾಗಿದೆ, ಮಾರಿಷಸ್‌ಗೆ ಶೇ.10 ಆರ್ಥಿಕ ನೆರವು ಏರಿಕೆ ಮಾಡಲಾಗಿದೆ.

### ಹಲವು ಉತ್ಪನ್ನಗಳ ಮೇಲಿನ ತೆರಿಗೆ ಇಳಿಕೆ



ನವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2026-27ನೇ ಸಾಲಿನ ಬಜೆಟ್ ಮಂಡನೆ ಮಾಡಿದ್ದು, ಹಲವು ಉತ್ಪನ್ನಗಳ ಮೇಲಿನ ತೆರಿಗೆಯನ್ನು ಇಳಿಕೆ ಮಾಡುವುದಾಗಿ ಘೋಷಿಸಿದ್ದಾರೆ.

ಮೇಕ್ ಇನ್ ಇಂಡಿಯಾಗೆ ಒತ್ತು ನೀಡುವ ಮೂಲಕ ಎಲೆಕ್ಟ್ರಾನಿಕ್ಸ್ ಮತ್ತು ಔಷಧಿಗಳ ಬೆಲೆಯನ್ನು ಇಳಿಕೆ ಮಾಡಲು ಸರ್ಕಾರ ನಿರ್ಧರಿಸಿದೆ. ಕೆಲವು ಆಮದು ವಸ್ತುಗಳ ಮೇಲಿನ ಸುಂಕವನ್ನು ಸರಿಪಡಿಸಿರುವುದರಿಂದ ಕೆಲವೊಂದು ವಸ್ತುಗಳು ದುಬಾರಿಯಾಗಲಿವೆ.

ಕ್ರೀಡಾ ಉಪಕರಣ, ಮೈಕ್ರೋವೇವ್ ಓವನ್, ಸೌರ ಫಲಕಗಳು, ಇವಿ ಬ್ಯಾಟರಿ, ಸ್ಮಾರ್ಟ್‌ಫೋನ್, ಮದ್ಯ, ಬೀಡಿ, ಔಷಧಿ, ಅಪರೂಪದ ಕಾಯಿಲೆಗಳ ಔಷಧ, ಚರ್ಮ ಉತ್ಪನ್ನಗಳು, ವಿಮಾನ ಬಿಡಿಭಾಗಗಳು, ಬಯೋ ಗ್ಯಾಸ್, ಸಿಎನ್‌ಜಿ, ಸೆಣಬು, ಸೋಲಾರ್ ಬಿಡಿಭಾಗ, ಬ್ಯಾಟರಿ, ಪಾದರಕ್ಷೆ ಅಗ್ಗ ಆಗಲಿವೆ.

ಸಿಗರೇಟ್, ಆಲ್ಕೋಹಾಲ್, ತಂಬಾಕು, ಆಮದು ಮಾಡಿಕೊಳ್ಳುವ ಯಂತ್ರೋಪಕರಣಗಳು, ಹೊರದೇಶಗಳಿಂದ ಆಮದು ಮಾಡಿಕೊಳ್ಳುವ ವಸ್ತುಗಳು, ಕಲ್ಲಿದ್ದಲು, ವಿದೇಶದಿಂದ ಆಮದಾಗುವ ಪ್ಲಾಸ್ಟಿಕ್ ವಸ್ತುಗಳು, ನಿರ್ದಿಷ್ಟ ಟೆಲಿಕಾಂ ಉಪಕರಣಗಳು ದುಬಾರಿಯಾಗಲಿವೆ.

### ರಾಜ್ಯಕ್ಕೆ ಶೇ. 4.13 ತೆರಿಗೆ ಪಾಲು ಹಂಚಿಕೆ

ನವದೆಹಲಿ: ಕೇಂದ್ರ ಸರ್ಕಾರವು ರಾಜ್ಯಕ್ಕೆ 2026-27ನೇ ಸಾಲಿನಲ್ಲಿ 63,049 ಕೋ.ರೂ. ತೆರಿಗೆ ಪಾಲು ಹಂಚಿಕೆ ಮಾಡಿದೆ. 16ನೇ ಹಣಕಾಸು ಆಯೋಗದ ಅನ್ವಯ ಕರ್ನಾಟಕಕ್ಕೆ ಶೇ.4.13 ತೆರಿಗೆ ಪಾಲು ಹಂಚಿಕೆಗೆ ಶಿಫಾರಸು ಮಾಡಿದೆ. 15ನೇ ಹಣಕಾಸು ಆಯೋಗವು ಶೇ. 3.64 ಹಂಚಿಕೆ ಮಾಡಿತ್ತು. ರಾಜ್ಯ ಸರ್ಕಾರವು 14ನೇ ಹಣಕಾಸು ಆಯೋಗದಲ್ಲಿ ನೀಡಿದಷ್ಟೇ ಅಂದರೆ ಶೇ. 4.71ರಷ್ಟು ಹಂಚಿಕೆ ಮಾಡುವಂತೆ ಮನವಿ ಮಾಡಿತ್ತು. ಆದರೆ, ಕೇಂದ್ರವು ರಾಜ್ಯಕ್ಕೆ 2026-27ನೇ ಸಾಲಿನಲ್ಲಿ 63,049 ಕೋಟಿ ರೂ. (ಶೇ. 4.13) ತೆರಿಗೆ ಪಾಲು ಹಂಚಿಕೆ ಮಾಡಿದೆ.

## ಕೇಂದ್ರ ಬಜೆಟ್‌ನಿಂದ ರಾಜ್ಯಕ್ಕೆ ಅನ್ಯಾಯ: ಡಿ.ಕೆ.ಶಿವಕುಮಾರ್

**ಬೆಂಗಳೂರು:** ಕೇಂದ್ರ ಸರ್ಕಾರದ ಬಜೆಟ್‌ನಿಂದ ರಾಜ್ಯಕ್ಕೆ ಯಾವ ಲಾಭವೂ ಇಲ್ಲ. ಅವರು ಹೇಳಿರುವ ಯಾವ ಹೈಸ್ಪೀಡ್ ರೈಲು ಓಡುವುದಿಲ್ಲವೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರತಿಕ್ರಿಯಿಸಿದ್ದಾರೆ.



ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ನರೇಗಾ ಯೋಜನೆಯಿಂದ ಮಹಾತ್ಮ ಗಾಂಧೀಜಿ ಅವರ ಹೆಸರು ತೆಗೆದು ಹೊಸ ಯೋಜನೆಗೆ ಅವರ ಹೆಸರಿಟ್ಟಿದ್ದಾರೆ. ಅದರಿಂದ ಯಾವ ಪ್ರಯೋಜನವಿಲ್ಲ. ನರೇಗಾ ಕಾಯ್ದೆಯನ್ನು ಪುನಃ ಸ್ಥಾಪಿಸಬೇಕು. ಏಕೆಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ 60:40 ಪ್ರತಿಶತ ನಿಧಿ ಹಂಚಿಕೆ ಸೂತ್ರದೊಂದಿಗೆ ಜಾರಿಗೆ ತರಲಾದ ಹೊಸ ಕಾಯ್ದೆಯನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದರು.

ಈ ಬಜೆಟ್‌ನಿಂದ ನಮ್ಮ ರಾಜ್ಯಕ್ಕೆ ಯಾವ ಪ್ರಮುಖ ಪಾಲು ಸಿಗುವುದಿಲ್ಲ. ಕೇಂದ್ರ ಬಜೆಟ್‌ನಿಂದ ಬೆಂಗಳೂರಿಗೆ ನಿರೀಕ್ಷೆಗಳಿದ್ದವು. ಪ್ರಧಾನಿ ನರೇಂದ್ರ ಮೋದಿ ರಾಜಧಾನಿಯನ್ನು ಜಾಗತಿಕ ನಗರವೆಂದು ಕರೆದಿದ್ದಾರೆ. ಆದರೆ, ಸರ್ಕಾರ ಅದಕ್ಕಾಗಿ ಏನು ಮಾಡಿದೆಯೆಂದು ಪ್ರಶ್ನಿಸಿದರು. ಕೇಂದ್ರದ ಅಸಹಕಾರದಿಂದ ಸಕ್ಕರೆ ಹಾಗು ಸಹಕಾರಿ ವಲಯದ ಕಾರ್ಖಾನೆಗಳು ತೊಂದರೆ ಎದುರಿಸುತ್ತಿವೆ. ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸುವ ಹಕ್ಕು ಕೇಂದ್ರಕ್ಕೆ ಇದೆ. ರೈತರಿಗೆ ಸಹಾಯ ಮಾಡಲು ಅವರು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

## ಕೇಂದ್ರ ಬಜೆಟ್‌ನಲ್ಲಿ ಜಿಲ್ಲೆ ಕಡೆಗಣನೆ: ಜೆಡಿಎಸ್ ವಿರುದ್ಧ ಹರಿಹಾಯ್ದ ಸಂಸದ ಶ್ರೇಯಸ್

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಅಭಿವೃದ್ಧಿ ಕುರಿತು ಇತ್ತೀಚೆಗೆ ಸಮಾವೇಶ ನಡೆಸಿ ಭಾಷಣ ಮಾಡಿದ್ದ ನಾಯಕರು ಬಜೆಟ್‌ನಲ್ಲಿ ಹಾಸನಕ್ಕೆ ಏನೂ ಕೊಡುಗೆ ಕಲ್ಪಿಸದೆ ಅಸಹಾಯಕರಾಗಿದ್ದಾರೆ. ಕೇವಲ ಮಾತಿ ನಿಂದ ಅಭಿವೃದ್ಧಿಯಾ ಗುವುದಿಲ್ಲವೆಂದು ಸಂಸದ ಶ್ರೇಯಸ್ ಪಟೇಲ್ ಅವರು ಜೆಡಿಎಸ್ ವಿರುದ್ಧ ಕಿಡಿಕಾರಿದ್ದಾರೆ.



ದೆಹಲಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ರಾಜ್ಯ ಹಾಗು ಜಿಲ್ಲೆಯನ್ನು ಸಂಪೂರ್ಣ ಕಡೆಗಣಿಸಿದೆ. ವಿರೋಧ ಪಕ್ಷದವರು ಸಂಸದರಾಗಿರುವುದೇ ತಪ್ಪು ಎಂಬಂತಾಗಿದೆ. ಜಿಲ್ಲೆಗೆ ಒಳಿತು ಮಾಡ ಬೇಕೆಂದು ಹತ್ತು-ಹಲವು ಕನಸುಗಳೊಂದಿಗೆ ಮೊದಲ ಬಾರಿ ಸಂಸದನಾಗಿದ್ದೇನೆ. ಈ ರೀತಿ ನಿರ್ಲಕ್ಷ್ಯ ಮಾಡಿದರೆ ಕ್ಷೇತ್ರ ಅಭಿವೃದ್ಧಿ ಹೇಗೆ ಎಂದು ಅವರು ಪ್ರಶ್ನಿಸಿದ್ದಾರೆ.

ಹಾಸನದಲ್ಲಿ ಜ.24 ರಂದು ಸಮಾವೇಶ ಮಾಡಿದ ಜೆಡಿಎಸ್ ನಾಯಕರು ಈ ಬಜೆಟ್ ಬಗ್ಗೆ ಏನು ಹೇಳುತ್ತಾರೆ ಕಾದು ನೋಡಬೇಕಿದೆ. ಎನ್‌ಡಿಎ ಮೈತ್ರಿಯಲ್ಲಿರುವುದರಿಂದ ಬಜೆಟ್‌ನಲ್ಲಿ ಜಿಲ್ಲೆಗೆ ವಿಶೇಷ ಯೋಜನೆಗಳು ಘೋಷಣೆಯಾಗುತ್ತವೆಂಬ ನಿರೀಕ್ಷೆ ಇತ್ತು. ಆದರೆ, ಕೇಂದ್ರದಿಂದ ಮಲತಾಯಿ ಧೋರಣೆ ಈ ವರ್ಷವೂ ಮುಂದುವರಿದಿದೆ. ಉಪ್ಪು-ಖಾರ ಇಲ್ಲದ ಸಪ್ಪೆ ಬಜೆಟ್ ಇದಾಗಿದೆ. ಜಿಲ್ಲೆಯ ಜ್ವಲಂತ ಸಮಸ್ಯೆಗಳನ್ನು ಪರಿಗಣಿಸಿಲ್ಲ. ಜಿಲ್ಲೆಗೆ ಐಐಟಿ ನೀಡುವಂತೆ ಮೂರು ಬಾರಿ ಮನವಿ ಮಾಡಿದ್ದೆ. ಕಾಡಾನೆ-ಮಾನವ ಸಂಘರ್ಷ ತಡೆಗೆ ಆನೆ ಕಾರಿಡಾರ್ ನಿರ್ಮಾಣಕ್ಕೆ ಹಲವು ಬಾರಿ ಪ್ರಸ್ತಾವನೆ ಸಲ್ಲಿಸಿದ್ದೆ. ಆದರೆ, ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸಿಲ್ಲ. ಆಶಾ ಹಾಗು ಅಂಗನವಾಡಿ ಕಾರ್ಯಕರ್ತರ ಗೌರವಧನ ಹೆಚ್ಚಿಸಲು ನೌಕರರು ಅಂಗಲಾಚಿದರೂ ಕಡೆಗಣಿಸಿದೆ. ವಿಧವಾ ವೇತನ ಹೆಚ್ಚಳಕ್ಕೆ ಆಗ್ರಹಿಸಲಾಗಿತ್ತಾದರೂ ಪರಿಗಣಿಸಿಲ್ಲವೆಂದು ಕಿಡಿಕಾರಿದರು.

ಜಿಲ್ಲೆಯ ವಿಶ್ವಪ್ರಸಿದ್ಧ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಅನುದಾನ ಘೋಷಿಸಿಲ್ಲ. ತೆಂಗು ಬೆಳೆಗಾರರನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ಬಿಡುಗಡೆ ಮಾಡಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ನೀಡುವ ಪ್ರೋತ್ಸಾಹ ಧನ ಹೆಚ್ಚಿಸಿಲ್ಲ. ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವಂತೆ ಎಷ್ಟೇ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಬಡವರು, ದೀನ ದಲಿತರ ಬಗ್ಗೆ ಕರುಣೆ ತೋರದ ಅಮಾನವೀಯ ಬಜೆಟ್ ಇದಾಗಿದೆ. ರಾಜ್ಯದಿಂದ ಆಯ್ಕೆಯಾಗಿರುವ ಆಡಳಿತ ಪಕ್ಷದ ಸಂಸದರು ಇನ್ನಾದರೂ ರಾಜ್ಯದ ಪರವಾಗಿ

### ಇಂದು 137ನೇ ಹುಣ್ಣಿಮೆ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಆದಿಚುಂಚನಗಿರಿ ಮಹಾ ಸಂಸ್ಥಾನ ಹಾಸನ ಶಾಖಾ ಮಠದ ವತಿಯಿಂದ ಫೆ. 2ರ ಸೋಮವಾರ ಸಂಜೆ 5.30ಕ್ಕೆ ಶ್ರೀ ಆದಿ ಚುಂಚನಗಿರಿ ಸಮುದಾಯ ಭವನದಲ್ಲಿ ಗುರು ತೋರಿದ ದಾರಿ ತಿಂಗಳ ಮಾಮನ ತೇರು 137ನೇ ಹುಣ್ಣಿಮೆ ಕಾರ್ಯಕ್ರಮ ಜರುಗಲಿದೆ.

ಪ್ರಸಕ್ತ ಪರಿಸ್ಥಿತಿಯಲ್ಲಿ ಹಿಂದುತ್ವ ಎಂಬ ವಿಷಯದ ಕುರಿತು ಸಾಮಾಜಿಕ ಕಾರ್ಯಕರ್ತ ಹಾಗು ಲೇಖಕ ವಾದಿರಾಜ್ ಅವರು ಉಪನ್ಯಾಸ ನೀಡಲಿದ್ದಾರೆ. ಆದಿಚುಂಚನಗಿರಿ ಶಾಖಾ ಮಠದ ಶಂಭುನಾಥ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ.

## ಮಡಿವಾಳ ಮಾಚಿದೇವ ಸಮಾನತೆಯ ಪ್ರತೀಕ

• ಪ್ರಜೋದಯ ವರದಿ

**ಹಾಸನ:** ಮಡಿವಾಳ ಮಾಚಿದೇವರು ಕೇವಲ ಒಂದು ಸಮುದಾಯದ ವ್ಯಕ್ತಿಯಲ್ಲ. ಶ್ರಮ, ಸತ್ಯ, ಸೇವೆ ಹಾಗು ಸಮಾನತೆಯ ಪ್ರತೀಕವಾಗಿದ್ದಾರೆಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಎಚ್.ಎಲ್.ಮಲ್ಲೇಶ್‌ಗೌಡ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಮಡಿವಾಳ ಮಾಚಿದೇವ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಕಾಯಕವೇ ಕೈಲಾಸ ಎಂಬ ತತ್ವವನ್ನು ಅಳವಡಿಸಿಕೊಂಡಿದ್ದ ಮಡಿವಾಳ ಮಾಚಿದೇವರು ಶೋಷಿತ ಮತ್ತು ಹಿಂದುಳಿದ ವರ್ಗಗಳ ಧ್ವನಿಯಾಗಿ ನಿಂತವರು. ಸಮಾಜದಲ್ಲಿ ದುಡಿಮೆಗೆ ಗೌರವ, ಮಾನವೀಯತೆ ಹಾಗು ಪರಸ್ಪರ ಸಹಕಾರ ಬೆಳೆಸುವಲ್ಲಿ ಅವರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು.



ಇಂದಿನ ಯುವ ಪೀಳಿಗೆ ಮಡಿವಾಳ ಮಾಚಿದೇವರ ಆದರ್ಶಗಳನ್ನು ಅಳವಡಿಸಿ ಕೊಂಡರೆ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಮಾನತೆ ಸ್ಥಾಪನೆಯಾಗುತ್ತದೆ. ಜಯಂತಿಗಳ ಆಚರಣೆ ಕೇವಲ ಸಂಪ್ರದಾಯಕ್ಕೆ ಸೀಮಿತವಾಗದೆ ಅವರ ವಿಚಾರಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವ ಕಾರ್ಯವಾಗಬೇಕೆಂದರು.

ಸಾಹಿತ್ಯ, ಸಂಸ್ಕೃತಿ ಹಾಗು ಸಾಮಾಜಿಕ ಜಾಗೃತಿಯ ಮೂಲಕ ಮಡಿವಾಳ ಮಾಚಿದೇವರ ಸಂದೇಶವನ್ನು ಜನರಿಗೆ ತಲುಪಿಸುವ ಅಗತ್ಯವಿದೆ. ಅವರ ಆದರ್ಶಗಳು ಹಾಗು ಸಮಾಜಕ್ಕೆ ನೀಡಿದ ಕೊಡುಗೆಗಳ ಕುರಿತು ಎಲ್ಲರೂ ಅರಿಯಬೇಕೆಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ತಾರಾನಾಥ್ ಮತ್ತಿತರರಿದ್ದರು.

### ಜಿಎಸ್‌ಟಿ ಸಂಗ್ರಹದಲ್ಲಿ ಭಾರೀ ಏರಿಕೆ

• ಪ್ರಜೋದಯ ವರದಿ

**ನವದೆಹಲಿ :** ಜನವರಿಯಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹವು ಶೇ. 6.2 ರಷ್ಟು ಹೆಚ್ಚಾಗಿ 1.93 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಮುಖ್ಯವಾಗಿ ಆಮದುಗಳಿಂದ ಬಂದ ಹೆಚ್ಚಿನ ಆದಾಯದಿಂದಾಗಿ ಎಂದು ಮೂಲಗಳು ತಿಳಿಸಿವೆ.

ಒಟ್ಟು ಮರುಪಾವತಿ ಶೇ.3.1 ರಷ್ಟು ಕುಸಿದು 22,665 ಕೋಟಿ ರೂ.ಗಳಿಗೆ ತಲುಪಿದೆ.ನಿವ್ವಳ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಆದಾಯವು ಶೇ. 7.6 ರಷ್ಟು ಹೆಚ್ಚಾಗಿ

» ನಾಲ್ಕನೇ ಪುಟದಲ್ಲಿ


### ಬಾಗಿಲು ತೆರೆಯದಿದ್ದರೂ ಉತ್ತಮ ನಿರ್ವಹಣೆಯ ಗರಿ | ಸಮೀಕ್ಷೆದಾರರ ನಡೆಗೆ ಬೇಸರ

## ಶೌಚಾಲಯ ನಿರ್ವಹಣೆ: ಟೀಕೆಗೆ ಗುರಿಯಾದ ಪ್ರಶಂಸಾ ಪತ್ರ

• ಪ್ರಜೋದಯ ವರದಿ

**ಹಾಸನ:** ಕೇಂದ್ರ ನಗರ ಮತ್ತು ವಸತಿ ವ್ಯವಹಾರಗಳ ಸಚಿವಾಲಯವು ಸ್ವಚ್ಛ ಭಾರತ್ ಅಭಿಯಾನ ಯೋಜನೆಯಡಿ ಹಾಸನ ಮಹಾನಗರ ಪಾಲಿಕೆಯು ಸುಸ್ಥಿರ ನೈರ್ಮಲ್ಯದಡಿ ಶೇ. 100ರಷ್ಟು ಭೌತಿಕ ಹಾಗು ಆರ್ಥಿಕ ಪ್ರಗತಿ ಸಾಧಿಸಿದೆಯೆಂದು ಪ್ರಶಂಸಾ ಪತ್ರ ಲಭಿಸಿರುವುದು ಸಾಕಷ್ಟು ಟೀಕೆಗೆ ಗುರಿಯಾಗಿದೆ.

ಸುಸ್ಥಿರ ನೈರ್ಮಲ್ಯದಡಿ, ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಅಗತ್ಯವಿರುವಷ್ಟು ಸಂಖ್ಯೆಯಲ್ಲಿ ವೈಯಕ್ತಿಕ ಶೌಚಾಲಯ, ಸಮುದಾಯ ಶೌಚಾಲಯ, ಸಾರ್ವಜನಿಕ ಶೌಚಾಲಯ, ಆಸ್ಪಿರೇಶನಲ್ ಶೌಚಾಲಯ, ಮೂತ್ರಾಲಯಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲಾಗಿದೆಯೆ ಎಂದು ನಗರಾಭಿವೃದ್ಧಿ ಇಲಾಖೆ ಮೆಚ್ಚುಗೆ ವ್ಯಕ್ತಪಡಿಸಿದೆ. ಮಹಾನಗರ ಪಾಲಿಕೆಯು ಅನು ಮೋದನೆಯಾದ ಎಲ್ಲಾ ಕಾಮಗಾರಿಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಿ ಶೇ. 100ರಷ್ಟು ಸಂಪೂರ್ಣವಾಗಿ ವೆಚ್ಚ ಮಾಡಿದೆ ಎಂದು ಹೇಳಲಾಗಿದೆ.



#### ಪ್ರಶಂಸೆಗೆ ಹೆಮ್ಮೆ ಇಲ್ಲ- ಸಹಜವೆಂದ ಅಧಿಕಾರಿಗಳು

ಸುಸ್ಥಿರ ನೈರ್ಮಲ್ಯದಡಿ ಶೇ. 100 ರಷ್ಟು ಆರ್ಥಿಕ ಮತ್ತು ಭೌತಿಕ ಪ್ರಗತಿಗೆ ಪ್ರಶಂಸಾ ಪತ್ರ ಬಂದಿರುವುದಕ್ಕೆ ಹೆಮ್ಮೆಪಡಬೇಕಿದ್ದ ಮಹಾನಗರ ಪಾಲಿಕೆ ಅಧಿಕಾರಿಗಳು ಆ ಬಗ್ಗೆ ಹೆಚ್ಚು ಮಾತನಾಡಲು ನಿರಾಕರಿಸಿದ್ದಾರೆ. ಕಚೇರಿ ಹಂತದಲ್ಲಿ ನೀಡಿರುವ ಪ್ರಶಂಸೆ ಅಷ್ಟೇ. ಇದು ಶೌಚಾಲಯಗಳ ನಿರ್ವಹಣೆ ಬಗ್ಗೆ ಅಧಿಕಾರಿಗಳು ತೋರಿಸುವ ಕಾಳಜಿಗೆ ಸಾಕ್ಷಿಯಾಗಿದೆ. ಶೌಚಾಲಯಗಳು ಜನರ ಉಪಯೋಗಕ್ಕೆ ಲಭ್ಯವಿಲ್ಲದಿದ್ದರೂ ಪ್ರಶಂಸೆಗೆ ಪಾತ್ರವಾಗಿರುವುದು ಹಾಸ್ಯಾಸ್ಪದವಾಗಿದೆ.

#### ಶೌಚಾಲಯಗಳಿಗೆ ಬೀಗ ಸಾಧನೆಯೇ ?

ನಗರದಲ್ಲಿ 14 ಸಾರ್ವಜನಿಕ ಶೌಚಾಲಯಗಳಿದ್ದು, ಅದರಲ್ಲಿ 4-5 ಶೌಚಾಲಯಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ. ಉಳಿದಂತೆ ಎಲ್ಲದಕ್ಕೂ ವರ್ಷಗಳಿಂದ ಬೀಗ ಹಾಕಲಾಗಿದೆ. ನಗರಾಭಿವೃದ್ಧಿ ಇಲಾಖೆ ಘೋಷಿಸಿದ ಪ್ರಶಂಸೆ ಯಾವ ಉದ್ದೇಶಕ್ಕೆ ಎಂಬುದೇ ಅರ್ಥವಾಗುತ್ತಿಲ್ಲ. ಶೌಚಾಲಯಗಳ ಬಾಗಿಲು ತೆರೆಯದೆ, ನೀರಿನ ವ್ಯವಸ್ಥೆ ಕಲ್ಪಿಸದೆ ಇರುವುದಕ್ಕೆ ಪ್ರಶಂಸೆಯೇ ಎಂದು ಸಾರ್ವಜನಿಕರು ಟೀಕಿಸುತ್ತಿದ್ದಾರೆ.

» ನಾಲ್ಕನೇ ಪುಟದಲ್ಲಿ

# ನಿವೇಶನ ವಿವಾದ ಸಂಬಂಧ ಯಶ್ ತಾಯಿ ಮತ್ತೆ ರಂಪಾಟ

## ಯಥಾಸ್ಥಿತಿಗೆ ಪೊಲೀಸರ ಸೂಚನೆ | ಗಂಟೆಗಟ್ಟಲೇ ಠಾಣೆಯಲ್ಲೇ ಠಿಕಾಣಿ

• ಪ್ರಜೋದಯ ವರದಿ

**ಹಾಸನ:** ಚಲನಚಿತ್ರ ನಟ ಯಶ್ ತಾಯಿ ಪುಷ್ಪಾ ಅವರ ಮನೆ ಸಮೀಪದ ನಿವೇಶನದ ಮಾಲೀಕತ್ವ ವಿಚಾರವಾಗಿ ವಾಗ್ವಾದ ಮುಂದುವರಿದಿದ್ದು, ಭಾನುವಾರವೂ ಜಿಪಿಎ ಹೋಲ್ಡರ್ ದೇವರಾಜು ಜೊತೆ ತೀವ್ರವಾಗ್ವಾದ ನಡೆಸಿದರು.

ಶನಿವಾರವಷ್ಟೇ ಸ್ಥಳಕ್ಕೆ ಭೇಟಿ ನೀಡಿದ್ದ ಪುಷ್ಪಾ ಅವರು ತಮ್ಮದೆಂದು ಹೇಳಿಕೊಳ್ಳುತ್ತಿರುವ ನಿವೇಶನ ಸುತ್ತ ಕಾಂಪೌಂಡ್ ಕಟ್ಟಿಸುತ್ತೇನೆಂದು ಶಪಥ ಮಾಡಿದ್ದರು. ಅದರಂತೆ ಭಾನುವಾರ ತಮ್ಮ ಸಂಬಂಧಿಕರು ಹಾಗು ಕಾರ್ಮಿಕರೊಂದಿಗೆ ಕಟ್ಟಡ ಕಾಮಗಾರಿ ಪ್ರಾರಂಭಿಸಿದ್ದರು. ಅದೇ ವೇಳೆ ಸ್ಥಳಕ್ಕಾಗಮಿಸಿದ ಜಿಪಿಎ ಹೋಲ್ಡರ್ ದೇವ ರಾಜು ಮತ್ತಿತರರು ಪ್ರತಿರೋಧ ಒಡ್ಡಿದರು. ನಿವೇಶನದ ಮಾಲೀಕತ್ವ ವಿವಾದದಲ್ಲಿರುವುದರಿಂದ ಕಾಮಗಾರಿ ತಕ್ಷಣ ಸ್ಥಗಿತಗೊಳಿಸುವಂತೆ ಒತ್ತಾಯಿಸಿದರು. ಅದರಿಂದ ಪುಷ್ಪಾ ಹಾಗು ದೇವರಾಜು ನಡುವೆ ವಾಗ್ವಾದ ನಡೆಯಿತು.

ನಾನು ಕೆಲಸ ಮಾಡಿಯೇ ತೀರುತ್ತೇನೆಂದು ಪಟ್ಟು ಹಿಡಿದ ಪುಷ್ಪಾ, ಸ್ಥಳದಲ್ಲೇ ನಿಂತು ಕಾಮ ಗಾರಿಯನ್ನು ಮುಂದುವರಿಸಿದರು. ಈ ಸಂದರ್ಭ ವಾಗ್ವಾದ ತೀವ್ರಗೊಂಡು ಕೈ ಕೈ ಮಿಲಾ ಯಿಸುವ ಹಂತಕ್ಕೆ ತಲುಪಿತು. ಪರಿಸ್ಥಿತಿ




ನಿಯಂತ್ರಣಕ್ಕೆ ಬಾರದ ಹಿನ್ನಲೆ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು.

ಘಟನೆಯ ಮಾಹಿತಿ ಪಡೆದ ಬಡಾವಣೆ ಪೊಲೀಸರು ದೌಡಾಯಿಸಿ ಎರಡೂ ಕಡೆಯ ವರನ್ನು ಸಮಾಧಾನಪಡಿಸಿದರು. ಈ ವೇಳೆ ಪುಷ್ಪಾ ಅವರು ಪೊಲೀಸರನ್ನು ಪ್ರಶ್ನಿಸಿ, ದೇವ ರಾಜು ಅವರನ್ನು ಏಕೆ ಬಂಧಿಸಿಲ್ಲ ಮತ್ತು ಕಾಮ ಗಾರಿಗೆ ಬಳಸಲಾಗುತ್ತಿದ್ದ ಜೆಸಿಬಿಯನ್ನು ಏಕೆ ಸೀಜ್ ಮಾಡಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿ ದರು. ಮಾಧ್ಯಮದವರು ವಿಡಿಯೋ ಚಿತ್ರೀ ಕರಣ ಮಾಡದಂತೆ ಅವರು ತಾಕೀತು ಮಾಡಿದರು. ಪೊಲೀಸರ ಮಧ್ಯಸ್ಥಿಕೆಯಿಂದ ಕಾಂಪೌಂಡ್ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸ ಲಾಯಿತು. ಕಾಮಗಾರಿಗೆ ಬಳಸು ತ್ತಿದ್ದ ಸಾಮಾಗ್ರಿಗಳನ್ನು ಸ್ಥಳಾಂತರಿಸಲಾಯಿತು.

### ಬಡಾವಣೆ ಠಾಣೆಗೆ ಇಬ್ಬರೂ ಹಾಜರು

ನಿವೇಶನ ಸುತ್ತ ಕಾಂಪೌಂಡ್ ನಿರ್ಮಾಣಕ್ಕೆ ಪೊಲೀಸರು ತಡೆಯೊಡ್ಡುತ್ತಿದ್ದಂತೆ ತನ್ನ ಬೆಂಬಲಿ ಗರೊಂದಿಗೆ ಪುಷ್ಪಾ ಅವರು ವಕೀಲರೊಂದಿಗೆ ಬಡಾವಣೆ ಠಾಣೆಗೆ ತೆರಳಿದರು. ಅವರ ಹಿಂದೆಯೇ ದೇವರಾಜು ಸಹ ಪ್ರತ್ಯೇಕ ಕಾರಿನಲ್ಲಿ ಠಾಣೆಗೆ ಬಂದರು. ಪೊಲೀಸ್ ಇನ್ಸ್ ಪೆಕ್ಟರ್ ರಾಘವೇಂದ್ರ ಪ್ರಸಾದ್ ಅವರನ್ನು ಭೇಟಿಯಾದ ಪುಷ್ಪಾ, ಎಫ್ಐಆರ್ ದಾಖಲಾಗಿದ್ದರೂ ದೇವ ರಾಜು ಅವರನ್ನು ಬಂಧಿಸಿಲ್ಲ. ಕಳೆದ ತಿಂಗಳು ಕಾಂಪೌಂಡ್ ನೆಲಸಮಗೊಳಿಸಿದ ಜೆಸಿಬಿ ಯನ್ನು ಏಕೆ ಸೀಜ್ ಮಾಡಿಲ್ಲವೆಂದು ಪ್ರಶ್ನಿಸಿದರು.

ಪುಷ್ಪಾ ಅವರ ವಾಗ್ವಾದ ಮುಂದುವರಿ ಯುತ್ತಿದ್ದಂತೆ ಇನ್ಸ್‌ಪೆಕ್ಟರ್ ಊಟಕ್ಕೆ ಹೋಗಿ ಬರುವುದಾಗಿ ತೆರಳಿದರು. ಸಂಜೆ 5.30ರ ವರೆಗೆ ಇನ್ಸ್‌ಪೆಕ್ಟರ್ ವಾಪಾಸ್ ಬರಲಿಲ್ಲ. ಆದರೂ ಪುಷ್ಪಾ ಹಾಗು ದೇವರಾಜು ಠಾಣೆಯಲ್ಲೇ ಕುಳಿತರು. ಮಧ್ಯಾಹ್ನದ ಊಟಕ್ಕೂ ಸಹ ಅವರು ಅಲ್ಲಿಂದ ಹೋಗಲಿಲ್ಲ. ಸಂಜೆ ಇನ್ಸ್‌ಪೆಕ್ಟರ್ ಆಗಮಿಸಿ, ಇದು ಸಿವಿಲ್ ಪ್ರಕರಣವಾಗಿರುವು ದಿಂದ ನಾವು ಅಂತಿಮ ತೀರ್ಮಾನ ಕೈಗೊಳ್ಳಲು ಸಾಧ್ಯವಿಲ್ಲ. ನ್ಯಾಯಾಲಯ ಆದೇಶದ ವರೆಗೆ ಯಥಾಸ್ಥಿತಿ ಕಾಪಾಡಬೇಕು. ಸದ್ಯಕ್ಕೆ ಕಾಂಪೌಂಡ್ ನಿರ್ಮಾಣ ಮಾಡಬಾರದೆಂದು ಸೂಚಿಸಿ ದರು. ಬಳಿಕ ಪುಷ್ಪಾ ಹಾಗು ದೇವರಾಜು ಠಾಣೆಯಿಂದ ನಿರ್ಗಮಿಸಿದರು.

# ಅದ್ದೂರಿ ಸಕಲೇಶ್ವರಸ್ವಾಮಿ ಬ್ರಹ್ಮರಥೋತ್ಸವ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದಲ್ಲಿ ಭಾನುವಾರ ಸಕಲೇಶ್ವರಸ್ವಾಮಿ ಬ್ರಹ್ಮ ರಥೋತ್ಸವ ಅದ್ದೂರಿಯಾಗಿ ನೆರವೇರಿತು.

ಜಾತ್ರಾ ಮಹೋತ್ಸವ ಅಂಗವಾಗಿ ಜ.30ರಿಂದ ವಿವಿಧ ಪೂಜಾ ವಿಧಿ-ವಿಧಾನಗಳು ಆರಂಭವಾಗಿವೆ. ಗಣಪತಿ ಹೋಮ, ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ, ಧ್ವಜಾರೋಹಣ, ಕಳಸ ಪ್ರತಿಷ್ಠಾಪನೆ ಕಾರ್ಯಕ್ರಮಗಳು ನಡೆದಿದ್ದು ಜ.31ರಂದು ಕುಂಕು ಮಾರ್ಚನೆ, ಗಿರಿಜಾ ಕಲ್ಯಾಣ ಮತ್ತು ನಂದಿವಾಹನೋತ್ಸವ ನಡೆಯಿತು. ಭಾನುವಾರ ಸಕಲೇಶ್ವರಸ್ವಾಮಿ ಬ್ರಹ್ಮ ರಥೋತ್ಸವ ನಡೆಯಿತು. ಬೆಳಿಗ್ಗೆ 11.30ಕ್ಕೆ ದೇವರನ್ನು ಹೊತ್ತು ಬ್ರಾಹ್ಮಣರ ಬೀದಿಯಲ್ಲಿ ಮೆರವಣಿಗೆ ಮಾಡಿ ನಂತರ ದೇವರ ವಿಗ್ರಹವನ್ನು ರಥದಲ್ಲಿ ಕೂರಿಸಲಾಯಿತು.

ಶಾಸಕ ಸಿಮೆಂಟ್ ಮಂಜು ಅವರು ಪತ್ನಿ ಪ್ರತಿಭಾ ಮಂಜುನಾಥ್ ಹಾಗು ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ಹಾಗು ಪತ್ನಿ ಚಂಚಲಾ ಕುಮಾರಸ್ವಾಮಿ ರಥದ ಪೂಜೆಯನ್ನು ನೆರವೇರಿಸಿದರು. ತೇರನ್ನು ದೇವಸ್ಥಾನದ ಆವರಣದಿಂದ ವಾಡಿಕೆಯಂತೆ ಬ್ರಾಹ್ಮಣರ ಬೀದಿಯಲ್ಲಿ 100 ಮೀಟರ್ ದೂರ ಎಳೆಯಲಾಯಿತು. ಫೆ.2ರ ಸೋಮವಾರ ದಿವ್ಯ ರಥೋತ್ಸವ ನಡೆಯಲಿದೆ.



## ಜೈಷ್-ಎ-ಮೊಹಮ್ಮದ್ ಸಂಘಟನೆಯ ಭಯೋತ್ಪಾದಕರಿಗಾಗಿ ಶೋಧ

• ಪ್ರಜೋದಯ ವರದಿ

**ಜಮ್ಮು:** ಜೈಷ್-ಎ-ಮೊಹಮ್ಮದ್ ಸಂಘಟನೆಯ ಮೂವರು ಭಯೋತ್ಪಾದಕರಿಗಾಗಿ ಜಮ್ಮು-ಕಾಶ್ಮೀರದ ಕಿಶ್ತ್ ವಾಡ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಭಾನುವಾರವೂ ಶೋಧ ನಡೆಸಿದವು.



ಭಯೋತ್ಪಾದಕರು ಪದೇ ಪದೇ ತಮ್ಮ ಅಡಗು ತಾಣಗಳನ್ನು ಬದಲಾಯಿಸುತ್ತಿದ್ದಾರೆ. ಕಾರ್ಯಾಚರಣೆ ಯನ್ನು ತೀವ್ರಗೊಳಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೆಲ ದಿನಗಳಿಂದ ಕಾರ್ಯಾಚರಣೆ ನಡೆಯುತ್ತಿದ್ದು, ಶನಿವಾರ ಗುಂಡಿನ ಚಕಮಕಿ ನಡೆದಿತ್ತು.ಅದರಲ್ಲಿ ಒಬ್ಬ ಭಯೋತ್ಪಾದಕ ಗಾಯಗೊಂಡಿರುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ಸುತ್ತ ಮುತ್ತಲಿನ ಪ್ರದೇಶಗಳಲ್ಲೂ ಶೋಧ ನಡೆಸಲಾಗುತ್ತಿದೆ. ಭಯೋತ್ಪಾದಕರಿಗೆ ಆಹಾರ ಮತ್ತು ವಸತಿ ಒದಗಿಸುತ್ತಿರುವವರ ಮೇಲೆಯೂ ತೀವ್ರ ನಿಗಾ ಇರಿಸಲಾಗಿದೆ ಎಂದು ತಿಳಿಸಿದ್ದಾರೆ.

# ಅಪೂರ್ಣ ಸಮುದಾಯ ಭವನ ಕಾಮಗಾರಿ ಮುಗಿಸಲು ಆದ್ಯತೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನಲ್ಲಿ ಸಮುದಾಯ ಭವನ ನಿರ್ಮಾಣಕ್ಕಿಂತ ಅಪೂರ್ಣಗೊಂಡಿರುವ ಕಾಮಗಾರಿ ಪೂರ್ಣಗೊಳಿಸಲು ಆದ್ಯತೆ ನೀಡಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕಿನ ಬಿರಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನ್ನಾಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ಗ್ರಾಮದಲ್ಲಿ ಸಮುದಾಯ ಭವನದ ಅವಶ್ಯಕತೆಯಿದೆ. ಅದರಿಂದ ಬಡವರು ದುಬಾರಿ ಬಾಡಿಗೆ ನೀಡಿ ಖಾಸಗಿ ಕಲ್ಯಾಣ ಮಂಟಪಗಳಲ್ಲಿ ಮದುವೆ ಸೇರಿ ಇತರೆ ಕಾರ್ಯಕ್ರಮ ಮಾಡುವುದು ತಪ್ಪುತ್ತದೆಂದರು. ಗಂಗಾ ಮತಸ್ಥ ಸಮುದಾಯವು ಸರ್ಕಾರಿ ಅನುದಾನಗಳ ಜೊತೆಗೆ ಸಾರ್ವಜನಿಕರ ಸಹಕಾರದಿಂದ ಹಣ ಸಂಗ್ರಹಿಸಿ ಸಮುದಾಯ ಭವನ ನಿರ್ಮಿಸಿರುವುದು ಗಮನಾರ್ಹ. ಜನ್ನಾಪುರ ಗ್ರಾಮಕ್ಕೆ ಹಂತ ಹಂತವಾಗಿ



ಮೂಲ ಸೌಕರ್ಯ ಒದಗಿಸುವ ಪ್ರಯತ್ನ ಮಾಡಲಾಗುವುದೆಂದರು.

ಬಿರಡಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸೋಮಶೇಖರ್ ಅವರು ಮಾತನಾಡಿ, ಈ ಹಿಂದಿನ ಶಾಸಕರು, ಹಾಲಿ ಶಾಸಕರು ಹಾಗು ವಿಧಾನ ಪರಿಷತ್ ಸದಸ್ಯರು ಸೇರಿ ಹಲವರು ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಿದ್ದಾರೆ. ಸಮುದಾಯ ಭವನದ ಪಕ್ಕದಲ್ಲಿ ದೇವಸ್ಥಾನ ನಿರ್ಮಾಣ ಮಾಡುವ ಯೋಜನೆಯಿದ್ದು, ಇದಕ್ಕೂ ನೆರವು ನೀಡುವಂತೆ ಮನವಿ ಮಾಡಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಶೃತಿ, ಮಾಜಿ ಅಧ್ಯಕ್ಷ ಸತೀಶ್, ಶಾರದಾ, ಮಧು ಮಣಿ, ವನಜಾಕ್ಷಿ, ಬೈಕೆರೆ ದೇವರಾಜ್, ಗಂಗಾ ಮತಸ್ಥ ಸಮಾಜದ ಗೋಪಾಲ್, ಧರ್ಮಪ್ಪ, ಮಂಜುನಾಥ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪಲ್ಲವಿ ಇದ್ದರು.

# ಸರ್ಕಾರಿ ಶಾಲಾ ಆವರಣದಲ್ಲಿ ಮಕ್ಕಳ ಮನೆ ಆರಂಭಿಸಲು ಸಲಹೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲಾ ಆವರಣದಲ್ಲಿ ಮಕ್ಕಳ ಮನೆ ಆರಂಭಿಸುವ ಕುರಿತು ಪಂಚಾಯಿತಿ ಆಡಳಿತ ಮತ್ತು ಗ್ರಾಮಗಳ ಮುಖಂಡರು ಚಿಂತನೆ ನಡೆಸಿ ಕಾರ್ಯರೂಪಕ್ಕೆ ತರಬೇಕೆಂದು ಶಾಸಕ ಎ.ಮಂಜು ಅವರು ಸಲಹೆ ನೀಡಿದರು.

ಭಾನುವಾರ ತಾಲ್ಲೂಕಿನ ಮೋಕಲಿ ಗ್ರಾಮ ಪಂಚಾಯಿತಿ ಕಚೇರಿಯ ನೂತನ ಸಭಾಂಗಣ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ತಾಲ್ಲೂಕಿನ 19ಗ್ರಾಮಗಳಲ್ಲಿನ ಸರ್ಕಾರಿ ಶಾಲಾ ಆವರಣದಲ್ಲಿ ನಮ್ಮ ಕುಟುಂಬದ ವತಿಯಿಂದ ಮಕ್ಕಳ ಮನೆ ಪೂರ್ವ ಪ್ರಾಥಮಿಕ ಶಾಲೆಯನ್ನು ಅತ್ಯಂತ ಹೆಚ್ಚು ಗುಣಮಟ್ಟದಿಂದ ಆರಂಭಿಸಿದ ಪರಿಣಾಮ 500ಕ್ಕೂ ಅಧಿಕ ಸಂಖ್ಯೆಯ ಮಕ್ಕಳು ಸಕಲ ಸೌಕರ್ಯವುಳ್ಳ ಶಿಕ್ಷಣವನ್ನು



ಪಡೆಯುತ್ತಿದ್ದಾರೆ. ಈ ಎಲ್ಲಾ ಮಕ್ಕಳ ಮನೆ ಶಾಲೆ ಸರ್ಕಾರಿ ಶಾಲಾ ಆವರಣದಲ್ಲಿಯೇ ನಡೆಯುತ್ತಿದೆ. ಖಾಸಗಿ ಶಾಲೆಗಳಲ್ಲಿ ದೊರೆಯುವ ಶಿಕ್ಷಣ ಕ್ಕಿಂತ ಅತ್ಯುತ್ತಮ ಶಿಕ್ಷಣ ಬೋಧನೆ ಬಡ ಮಕ್ಕಳಿಗೆ ದೊರೆಯುತ್ತಿದೆ. ಕಳೆದ ಬಾರಿ ತಾಲ್ಲೂಕಿಗೆ ಶಿಕ್ಷಣ ಸಚಿವ ಮಧುಬಂಗಾರಪ್ಪ ಅವರು ಆಗಮಿಸಿದ ವೇಳೆ ನಮ್ಮ ಮಕ್ಕಳ ಮನೆ ಶಾಲೆಯ ವೀಕ್ಷಣೆ ಮತ್ತು ಸಕಲ ಶಿಕ್ಷಣ ಬೋಧನಾ ಕ್ರಮವನ್ನು ಮನವರಿಕೆ ಮಾಡಿಕೊಡಲಾಗಿತ್ತು. ಈ ಸಲುವಾಗಿ ರಾಜ್ಯ ಸರ್ಕಾರ 1000 ಸಾವಿರ ಶಾಲೆಗಳನ್ನು ಆರಂಭಿಸಿದೆ ಎಂದು ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ಸಕಲ ಸವಲತ್ತುಗಳು ಮಕ್ಕಳಿಗೆ ಉಚಿತವಾಗಿ ದೊರೆಯುತ್ತಿವೆ. ದೇವರ ಹಟ್ಟಿ ಕುಟುಂಬದಿಂದ ಪ್ರತಿ ಮಕ್ಕಳ ಮನೆಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲಾ ಗುತ್ತಿದೆ. ಸಾವಿರಾ ರೂ. ಹಣವನ್ನು ಖಾಸಗಿ ಶಾಲೆಗೆ ದಂಡ ಕಟ್ಟುವ ಬದಲು ಸರ್ಕಾರಿ ಶಾಲೆ ಗಳಲ್ಲಿ ಆರಂಭಗೊಂಡಿರುವ ಮಕ್ಕಳ ಮನೆ ಹಾಗು ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಸೇರಿಸಿ ಸರ್ಕಾರಿ ಶಾಲೆ ಉಳಿವು, ಉನ್ನತಿಗೆ ಸಹಕಾರ ನೀಡಬೇಕೆಂದು ಅವರು ಪೋಷಕರಲ್ಲಿ ಮನವಿ ಮಾಡಿದರು.

ಹೊಸದಾಗಿ ಅನುಷ್ಠಾನಕ್ಕೆ ಬರುವ ಉದ್ಯೋಗಖಾತ್ರಿ ಯೋಜನೆ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕಾದರೇ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೃಷಿಕರ ತೋಟಗಾರಿಕೆ, ಕೃಷಿ ಇತರೆ ಕೆಲಸಗಳನ್ನು ಆಯಾ ರೈತ ಕುಟುಂದವರಿಗೆ ನೀಡಿದರೇ ಪ್ರಯೋಜನಕ್ಕೆ ಬದಲಿದೆ. ಪ್ರತಿ ರೈತ ಕುಟುಂಬದಲ್ಲಿ ನಾಲ್ಕೈದು ಮಂದಿ ಇದ್ದೇ ಇರುತ್ತಾರೆ ಇವರಿಗೆ ಜಾಬ್ ಕಾರ್ಡ್ ನೀಡಿ ಯೋಜನೆಯನ್ನು ಯಶಸ್ವಿಯಾಗಿಸಬೇಕೆಂದು ಪಿಡಿಒ ಮಹಾದೇವಪ್ಪಗೆ ಸೂಚನೆ ನೀಡಿದರು.

ಮೋಕಲಿ ಗ್ರಾಮ ಪಂಚಾಯಿತಿ ಪಿಡಿಒ ಮಹಾದೇವಪ್ಪ, ಆಡಳಿತ ಮಂಡಳಿ ಹಾಗೂ ಗುತ್ತಿಗೆ ದಾರರಿಂದ ಸಭಾಂಗಣ ಕಾಮಗಾರಿ ಉತ್ತಮವಾಗಿ ಮೂಡಿಬಂದಿದೆ. ಕಳೆದ ಐದು ವರ್ಗಗಳ ಅವಧಿಯಲ್ಲಿ ಸದಸ್ಯರಾಗಿ, ಅಧ್ಯಕ್ಷ, ಉಪಾಧ್ಯಕ್ಷರಾಗಿ ಸೇವೆ ಮಾಡುವ ಅವಕಾಶ ಸಿಕ್ಕಿದೆ. ಈ ಹಂತದಲ್ಲಿ ನೀವು ಕೈಗೊಂಡಿರುವ ಉತ್ತಮ ಕೆಲಸಗಳು ನಿಮ್ಮನ್ನು ಮುಂದಿನ ಅವಧಿಯ ಸದಸ್ಯರು, ಜನ ಸಾಮಾನ್ಯರು ಗುರುತಿಸಿ ಮೆಚ್ಚಿಗೆ ವ್ಯಕ್ತಪಡಿಸಿದಾಗ ಮಾತ್ರ ಸಾರ್ಥಕತೆ ಸಾಧ್ಯ ವಾಗುತ್ತದೆ. ಜನ ಪ್ರತಿನಿಧಿಗಳಿಗೆ ದೊರೆಯುವ ದೊಡ್ಡಬಹುಮಾನ ಇದಾಗಿದೆ ಎಂದು ಹೇಳಿದರು.

ಪ್ರತಿಭಾವಂತ ವಿದ್ಯಾರ್ಥಿಗಳು, ಚುನಾಯಿತ ಸದಸ್ಯರನ್ನು ಗೌರವಿಸಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕುಸುಮಾ, ಉಪಾಧ್ಯಕ್ಷ ಕುಮಾರ್, ಸದಸ್ಯ ಈರಾಜಿ, ಮುಖಂಡರಾದ ಮುತ್ತಿಗೆ ರಾಜೇಗೌಡ, ನರಸೇಗೌಡ, ವೀರಾಜ್, ಕೃಷ್ಣೇಗೌಡ, ದಿವಾಕರ್ ಇತರರು ಉಪಸ್ಥಿತರಿದ್ದರು.

## ಬಜೆಟ್ ಎಫೆಕ್ಟ್: ಷೇರು ಮಾರುಕಟ್ಟೆಯಲ್ಲಿ ಭಾರೀ ಕುಸಿತ




• ಪ್ರಜೋದಯ ವರದಿ

**ಮುಂಬೈ:** ಕೇಂದ್ರ ಬಜೆಟ್ ಬೆನ್ನಲ್ಲೇ ಭಾನುವಾರದ ಷೇರು ಮಾರುಕಟ್ಟೆ ವಹಿವಾಟು ಮಹಾ ಪತನ ಕಂಡಿದೆ.

ಷೇರು ಮಾರುಕಟ್ಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಎರಡೂ ರೆಡ್‌ನಲ್ಲಿ ವಹಿವಾಟು ಅಂತ್ಯಗೊಳಿಸಿದೆ. ಸೆನ್ಸೆಕ್ಸ್ ಬರೊಬ್ಬರಿ ಶೇ. 2.23ರಷ್ಟು ಕುಸಿತ ಕಂಡಿದ್ದರೆ, ನಿಫ್ಟಿ ಕೂಡ ಶೇ.2.33ರಷ್ಟು ಇಳಿಕೆ ದಾಖಲಿಸಿದೆ.

ಸೆನ್ಸೆಕ್ಸ್ ಬರೊಬ್ಬರಿ 1,843.43 ಅಂಕಗಳ ಇಳಿಕೆಯೊಂದಿಗೆ 80,722.94 ಅಂಕಗಳಿಗೆ ಕುಸಿತವಾಗಿದ್ದರೆ ನಿಫ್ಟಿ 593.45 ಅಂಕಗಳ ಕುಸಿತದೊಂದಿಗೆ 24,825.45 ಅಂಕಗಳಿಗೆ ಇಳಿಕೆಯಾಗಿ ದಿನದ ವಹಿವಾಟು ಅಂತ್ಯಗೊಳಿಸಿದೆ.

ಕಳೆದ 6 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಬಜೆಟ್ ಮಂಡನೆ ದಿನ ಭಾರತೀಯ ಷೇರು ಮಾರುಕಟ್ಟೆ ಭಾರೀ ಕುಸಿತವಾಗಿದೆ. ಅದಕ್ಕೂ ಮೊದಲು 2020ರ ಫೆ.1ರಂದು 30 ಷೇರುಗಳ ಬಿಎಸ್‌ಇ ಮಾನದಂಡವು 987.96 ಪಾಯಿಂಟ್‌ಗಳು ಅಥವಾ ಶೇ. 2.42 ರಷ್ಟು ಕುಸಿತದೊಂದಿಗೆ ಕೊನೆಗೊಂಡಿತ್ತು.

**9.40 ಲಕ್ಷ ಕೋಟಿ ರೂ. ನಷ್ಟ**

ಭಾನುವಾರದ ವಹಿವಾಟಿನಲ್ಲಿ ಹೂಡಿಕೆದಾರರ ಬರೊಬ್ಬರಿ 9.40 ಲಕ್ಷ ಕೋಟಿ ರೂ. ನಷ್ಟವಾಗಿದೆ. ಬಿಎಸ್‌ಇ-ಪಟ್ಟಿ ಮಾಡಿದ ಕಂಪನಿಗಳ ಮಾರುಕಟ್ಟೆ ಬಂಡವಾಳೀಕರಣವು ಒಂದೇ ದಿನದಲ್ಲಿ 9,40,581.75 ಕೋಟಿ ರೂ. ಗಳಷ್ಟು ಕುಸಿದು 4,50,61,658.60 ಕೋಟಿ ರೂ.ಗಳಿಗೆ ( 4.90 ಟ್ರಿಲಿಯನ್) ತಲುಪಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಉತ್ಪನ್ನಗಳ ಮೇಲಿನ ಸೆಕ್ಯುರಿಟೀಸ್ ಟ್ರಾನ್ಸಾಕ್ಷನ್ ತೆರಿಗೆ ಹೆಚ್ಚಳವನ್ನು ಪ್ರಸ್ತಾಪಿಸಿದ ನಂತರ ಮಾರುಕಟ್ಟೆಗಳು ಸುಮಾರು 2 ಪ್ರತಿಶತದಷ್ಟು ಕುಸಿದು ಹೂಡಿಕೆದಾರರ ಸಂಪತ್ತು 9.40 ಲಕ್ಷ ಕೋಟಿ ರೂ.ಗಳಷ್ಟು ತೀವ್ರವಾಗಿ ಕುಸಿದಿದೆ.

**ಯಾರಿಗೆ ಲಾಭ-ಯಾರಿಗೆ ನಷ್ಟ**

ಸೆನ್ಸೆಕ್ಸ್‌ನಲ್ಲಿ ಪಟ್ಟಿ ಮಾಡಲಾದ 30 ಸಂಸ್ಥೆಗಳ ಪೈಕಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ.5.61 ರಷ್ಟು ಕುಸಿದರೆ,ಅದಾನಿಪೋರ್ಟ್ಸ್ ಶೇ.5.53 ರಷ್ಟು ಕುಸಿದಿದೆ. ಭಾರತ್ ಎಲೆಕ್ಟ್ರಾನಿಕ್ಸ್, ಐಟಿಸಿ, ಟಾಟಾ ಸ್ಟೀಲ್, ಅಲ್ಟ್ರಾಟೆಕ್ ಸಿಮೆಂಟ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಸಂಸ್ಥೆಯ ಷೇರುಗಳ ಮೌಲ್ಯ ಕೂಡ ಗಣನೀಯ ಕುಸಿತ ಕಂಡಿದೆ. ಉಳಿ ದಂತೆ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಇನ್ಫೋಸಿಸ್, ಸನ್ ಫಾರ್ಮಾ ಮತ್ತು ಟೈಟಾನ್ ಲಾಭ ಗಳಿಸಿವೆ.

# ಬೇಲೂರಿನಲ್ಲಿ ಅರ್ಥಪೂರ್ಣ ವ್ಯಾಸ ಪೂರ್ಣಿಮೆ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಶಿವಜ್ಯೋತಿ ಪಣಗಾಣಿಗರ ಸಂಘದಿಂದ ವ್ಯಾಸ ಪೂರ್ಣಿಮೆ ಅಂಗವಾಗಿ ಶ್ರೀ ಚನ್ನಕೇಶವಸ್ವಾಮಿ ದೇಗುಲದಲ್ಲಿ ಭಾನುವಾರ ವಿಶೇಷ ಪೂಜೆ ಸಲ್ಲಿಸಲಾಯಿತು.

ಗಾಣಿಗರ ಸಂಘದ ಎಲ್ಲಾ ಸದಸ್ಯರು ಕುಟುಂಬ ಸಮೇತ ಶ್ರೀ ಚನ್ನಕೇಶವಸ್ವಾಮಿ ದೇಗುಲಕ್ಕೆ ಆಗಮಿಸಿ ದೇವರಿಗೆ ವಿಶೇಷವಾಗಿ ಅಭಿಷೇಕ ನೆರವೇರಿಸಿದ ನಂತರ ಭಕ್ತರ ಸಮ್ಮುಖದಲ್ಲಿ ಪೂಜೆ ಹಾಗು ಮಹಾ ಮಂಗಳಾರತಿ ನೆರವೇರಿಸಲಾಯಿತು.

ಶ್ರೀ ಚನ್ನಕೇಶವಸ್ವಾಮಿ ದೇವಾಲಯದ ಪ್ರಧಾನ ಅರ್ಚಕ ಶ್ರೀನಿವಾಸ್ ಭಟ್ಟ ಅವರು ಮಾತನಾಡಿ, ವ್ಯಾಸ ಪೂರ್ಣಿಮೆ ಅತ್ಯಂತ ಪವಿತ್ರ ದಿನ. ವ್ಯಾಸ ಮಹರ್ಷಿಗಳು ಈ ದಿನ ಹಿಂದೂಗಳ ಪವಿತ್ರ ಗ್ರಂಥ ಮಹಾಭಾರತವನ್ನು ಲೋಕಕ್ಕೆ ಸಮರ್ಪಿಸಿದ ದಿನವಾಗಿದೆ. ಅಂತಹ ಮಹಾನ್ ವ್ಯಾಸ ಗುರುಗಳನ್ನು ಸ್ಮರಿಸುವ ಈ



ದಿನವನ್ನು ಗಾಣಿ ಗರ ಸಮುದಾಯದವರು ಹಲವು ವರ್ಷಗಳಿಂದ ಆಚರಿಸುತ್ತಿದ್ದಾರೆಂದರು.

ಗಾಣಿಗರ ಸಂಘದ ಜಂಟಿ ಕಾರ್ಯದರ್ಶಿ ಎನ್.ಅನಂತು ಅವರು ಮಾತನಾಡಿ, ಒಂದು ಶತಮಾನಕ್ಕೂ ಹಿಂದಿನಿಂದಲೂ ವ್ಯಾಸ ಪೂರ್ಣಿಮೆಯನ್ನು ಸಮುದಾಯದಿಂದ ಆಚರಿಸಲಾಗುತ್ತಿದೆ. ಪೂರ್ವಿಕರ ಸೂಚನೆಯಂತೆ ಚನ್ನಕೇಶವಸ್ವಾಮಿಗೆ ಪೂಜೆ ಸಲ್ಲಿಸಿ ಗುರುವಂದನೆ ಸಲ್ಲಿಸಿದ್ದೇವೆಂದರು. ಅರ್ಚಕ ನರಸಿಂಹ ಪ್ರಿಯ ಭಟ್ಟ, ಗಾಣಿಗರ ಸಂಘದ ಅಧ್ಯಕ್ಷ ಬಿ.ಎಲ್.ನಾಗರಾಜ್, ಪುರಸಭೆ ಸದಸ್ಯ ಪ್ರಭಾಕರ್, ಸಂಘದ ಸದಸ್ಯ ರಾದ ಜಗದೀಶ್, ಚಂದ್ರಶೇಖರ್, ನಂಜುಂಡ, ಜೀವನ್, ಕೇಶವ, ಯಶವಂತ್ ಇತರರಿದ್ದರು.

## ಮೂಢ ನಂಬಿಕೆಯಿಂದ ಪ್ರಗತಿಗೆ ಅಡ್ಡಗಾಲು: ಬಿ.ಆರ್.ಜಾನಕಿ



• ಪ್ರಜೋದಯ ವರದಿ

**ಹಾಸನ:** ಮೂಢ ನಂಬಿಕೆಗಳು ಮಾನವನ ವೈಯಕ್ತಿಕ ಮತ್ತು ಸಾಮಾಜಿಕ ಪ್ರಗತಿಗೆ ಅಡ್ಡಿಯಾಗುತ್ತಿವೆ. ಅದರಿಂದ ಮನುಷ್ಯ ಮೋಸ ಹೋಗುತ್ತಿದ್ದು, ಅಮೂಲ್ಯ ಸಮಯ, ಹಣ ಹಾಗು ಚಿಂತನಾ ಶಕ್ತಿ ಕಳೆದು ಕೊಳ್ಳುತ್ತಿದ್ದಾನೆಂದು ಬಿಜಿವಿಎಸ್ ಜಿಲ್ಲಾ ಕಾರ್ಯದರ್ಶಿ ಬಿ.ಆರ್.ಜಾನಕಿ ಅವರು ಹೇಳಿದರು.

ಇಲ್ಲಿನ ಕುವೆಂಪು ನಗರದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯಿಂದ ಹಮ್ಮಿಕೊಂಡಿದ್ದ ವೈಜ್ಞಾನಿಕ ಮನೋವೃತ್ತಿ ಮತ್ತು ಮೂಢನಂಬಿಕೆಗಳು ವಿಷಯ ಕುರಿತ ಸಂವಾದದಲ್ಲಿ ಮಾತನಾಡಿ, ಮೂಢ ನಂಬಿಕೆಗಳಿಗೆ ದೇವರು ಅಥವಾ ಧರ್ಮದೊಂದಿಗೆ ಯಾವುದೇ ನೇರ ಸಂಬಂಧವಿಲ್ಲ. ವಿಶ್ವದ ಭೌತಿಕ ನಿಯಮಗಳ ಆಧಾರದಲ್ಲಿ ಮೂಢ ನಂಬಿಕೆಗಳಿಗೆ ಕಾರಣ ನೀಡಲು ಸಾಧ್ಯವಿಲ್ಲವೆಂದರು.

ವಿದ್ಯಾರ್ಥಿಗಳು ಪ್ರಶ್ನೋತ್ತರಗಳ ಮೂಲಕ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ವೈಜ್ಞಾನಿಕ ಮನೋವೃತ್ತಿಯ ಅಗತ್ಯತೆಯ ಕುರಿತು ಬಿಜಿವಿಎಸ್ ತಾಲ್ಲೂಕು ಕಾರ್ಯ ದರ್ಶಿ ಬಿ.ಕೆ. ಲೋಲಾಕ್ಷಿ ಮಾರ್ಗದರ್ಶನ ನೀಡಿದರು.

ಮುಖ್ಯ ಶಿಕ್ಷಕಿ ಎನ್.ಎಸ್.ರಾಧಾ, ಶಿಕ್ಷಕರಾದ ಎಸ್.ಆರ್.ಮೀನಾ, ಆರ್.ಮೀನಾಕ್ಷಿ, ಎಂ.ಆರ್.ರಶ್ಮಿ, ಜಿ.ಜಿ.ರವೀಂದ್ರ ಮತ್ತಿತರರಿದ್ದರು.

## ಪ್ರತಿಯೊಬ್ಬ ನಾಗರಿಕನು ಕಡ್ಡಾಯವಾಗಿ ಮತ ಚಲಾಯಿಸಬೇಕು

• ಪ್ರಜೋದಯ ವರದಿ

**ಅರಕಲಗೂಡು:** ಮತದಾನವು ಪ್ರಜಾಪ್ರಭುತ್ವದ ಆಧಾರಸ್ತಂಭವಾಗಿದ್ದು, ಪ್ರತಿಯೊಬ್ಬ ಅರ್ಹ ನಾಗರಿಕನು ಕಡ್ಡಾಯವಾಗಿ ಮತ ಚಲಾಯಿಸಬೇಕೆಂದು ಉಪನ್ಯಾಸಕ ಬಿ.ಪಿ. ಬಸವರಾಜು ಅವರು ತಿಳಿಸಿದರು.

ಪಟ್ಟಣದ ಸರ್ಕಾರಿ ಐಟಿಐ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಮತದಾರರ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾ ಡಿದ ಅವರು, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ, ಮತದಾನದ ಇತಿಹಾಸ ಹಾಗೂ ಮತದಾರರ ಹಕ್ಕು ಮತ್ತು ಕರ್ತವ್ಯಗಳನ್ನು ಅರಿತು ಕಡ್ಡಾಯವಾಗಿ ಮತದಾನದಲ್ಲಿ ಪಾಲ್ಗೊಂಡಾಗ ಮಾತ್ರ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಮತ್ತು ಪ್ರಜಾಪ್ರಭುತ್ವವನ್ನು ಜೀವಂತವಾಗಿಡುವ ಪ್ರಮುಖ ಕರ್ತವ್ಯವೂ ಆಗಿರುತ್ತದೆ ಎಂದರು.

18 ವರ್ಷ ತುಂಬಿದ ಪ್ರತಿಯೊಬ್ಬ ಭಾರತೀಯ ನಾಗರಿಕನು ತನ್ನ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಯಾವುದೇ ಭಯ, ಲಾಲಸೆ ಅಥವಾ ಒತ್ತಡ ವಿಲ್ಲದೆ ಸ್ವತಂತ್ರವಾಗಿ ಮತ ಚಲಾಯಿಸಬೇಕಿದೆ.ಮತದಾನ ಪ್ರಕ್ರಿಯೆಯಲ್ಲಿ ಯುವಜನರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಯುವ ಶಕ್ತಿಯ ಜಾಗೃತಿಯಿಂದಲೇ ಬಲಿಷ್ಠ ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಮತದಾನದಲ್ಲಿ ಭಾಗವಹಿಸುವುದರಿಂದ ಜನಸಾಮಾನ್ಯರು ತಮ್ಮ ಧ್ವನಿಯನ್ನು ಆಡಳಿತ ವ್ಯವಸ್ಥೆಗೆ ತಲುಪಿಸಬಹುದೆಂದು ಸ್ಪಷ್ಟಪಡಿಸಿದರು. ಉಪನ್ಯಾಸದ ಅಂತ್ಯದಲ್ಲಿ ಅವರು ಎಲ್ಲರನ್ನೂ ನಿಯಮಿತವಾಗಿ ಮತದಾನದಲ್ಲಿ ಭಾಗವಹಿಸುವ ಪ್ರತಿಜ್ಞೆ ತೆಗೆದುಕೊಳ್ಳುವಂತೆ ಪ್ರೇರೇಪಿಸಿದರು.

ಕಾರ್ಯಕ್ರಮದ ಭಾಗವಾಗಿ ಮತದಾನ ಜಾಗೃತಿ ಕಾರ್ಯಕ್ರಮ, ಪಾದಯಾತ್ರೆ ಹಾಗೂ ಮತದಾರರ ಪ್ರತಿಜ್ಞಾ ವಿಧಿಯನ್ನು ಹಮ್ಮಿಕೊಳ್ಳಲಾಯಿತು. ಈ ಮೂಲಕ ಮತದಾನದ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಲಾಯಿತು.

ಐಟಿಐ ಕಾಲೇಜಿನ ಯೋಗನಾಥ್, ವಸಂತ್ ಪುನೀತಾ, ಸ್ಮಿತಾ, ಸುನಿಲ್, ದೇವರಾಜ್, ಚಂದ್ರಿಕಾ, ಪ್ರದೀಪ್, ಹರೀಶ್ ಮತ್ತು ಆನಂದ್ ಇತರರು ಹಾಜರಿದ್ದರು.



# ಹೊಳೆನರಸೀಪುರದಲ್ಲಿ ಮಾಚಿದೇವ ಜಯಂತಿ



• ಪ್ರಜೋದಯ ವರದಿ

**ಹೊಳೆನರಸೀಪುರ:** ನಾಡು ಕಂಡ ಶ್ರೇಷ್ಠ ವಚನಕಾರ ಮಡಿವಾಳ ಮಾಚಿದೇವ ಎಂದು ಮಡಿವಾಳ ಸಮಾಜದ ತಾಲ್ಲೂಕು ಅಧ್ಯಕ್ಷ ಮನೋಹರ್ ಅವರು ಹೇಳಿದರು.

ಪಟ್ಟಣದ ಮಡಿವಾಳರ ಬೀದಿಯಲ್ಲಿರುವ ರಾಮ ಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶ್ರೀ ಮಡಿವಾಳ ಮಾಚಿದೇವರ ಜಯಂತೋತ್ಸವದಲ್ಲಿ ಮಾತನಾಡಿ, ಮಾಚಿದೇವ ಅವರು 12ನೇ ಶತಮಾನದಲ್ಲಿಯೇ ದುರ್ಬಲರ, ಶೋಷಣೆ, ಜಾತೀಯತೆ, ಮೇಲು ಕೀಳು, ತಾರತಮ್ಯ, ಅಸ್ಪೃಶ್ಯತೆ, ಮೂಢ ನಂಬಿಕೆಗಳ ವಿರುದ್ಧ ಅವಿರತವಾಗಿ ಶ್ರಮಿಸಿದ ಅಪ್ರತಿಮ ಎಂದರು.

ಶಿಕ್ಷಣಕ್ಕೆ ಹೆಚ್ಚು ಒತ್ತುಕೊಟ್ಟು ಶಿಕ್ಷಣದಿಂದ ವಂಚಿತರಾದವರಿಗೆ ಅವಕಾಶ ಕಲ್ಪಿಸಿದ ಮಹಾಪುರುಷ. ತಮ್ಮ ವಚನಗಳ ಮೂಲಕ ಸಮಾಜದಲ್ಲಿನ ಅಂಕು-ಡೊಂಕುಗಳನ್ನು ತಿದ್ದಿದ ಮಹಾಪುರುಷರಲ್ಲಿ ಮಾಚಿದೇವ ಪ್ರಮುಖರು ಎಂದರು.

ಮಡಿವಾಳ ಮಾಚಿದೇವ ಅವರು ಸುಮಾರು 354 ವಚನ ರಚಿಸಿದ್ದಾರೆ. ತಮ್ಮ ವಚನಗಳ ಮೂಲಕವೇ ಸಮಾಜವನ್ನು ಜಾಗೃತಿಗೊಳಿಸುವ ಕಾಯಕ ಮಾಡುತ್ತಿದ್ದರು. ಮಡಿವಾಳ ಸಮಾಜದ ಮೂಲ ಪುರುಷ, ಕಲ್ಯಾಣ ಕ್ರಾಂತಿ ಪುರುಷ ಎಂದರು.

ಮಡಿವಾಳ ಸಂಘದ ಉಪಾಧ್ಯಕ್ಷ ಪುಟ್ಟರಾಜು, ನಂಜುಂಡಿ, ಕಾರ್ಯದರ್ಶಿ ಸುಜಯ್ ಕುಮಾರ್, ಖಜಾಂಚಿ ಅನಿಲ್ ಕುಮಾರ್, ನಿವೃತ್ತ ಅಮೀನರಾದ ಯೋಗ ನರಸಿಂಹ ಮತ್ತಿತರರಿದ್ದರು.

# ಮರಸು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶತಮಾನೋತ್ಸವ

• ಪ್ರಜೋದಯ ವರದಿ

**ಆಲೂರು:** ಶತಮಾನ ಕಂಡ ಕಸಬಾ ಮರಸು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಳೆ ವಿದ್ಯಾರ್ಥಿಗಳು ಎಸ್.ಡಿ.ಎಂ.ಸಿ., ಗ್ರಾಮಸ್ಥರ ಸಹಕಾರದೊಂದಿಗೆ ಒಗ್ಗೂಡಿ ಜ.30 ರಂದು ಶತಮಾನೋತ್ಸವದೊಂದಿಗೆ ಇಂಗ್ಲೀಷ್ ಫೆಸ್ಟ್ ಕಾರ್ಯಕ್ರಮ ನಡೆಯಿತು.

ಈ ಶಾಲೆಯಲ್ಲಿ ಶಿಕ್ಷಣ ಪಡೆದ ಹಲವು ವಿದ್ಯಾರ್ಥಿಗಳು, ಶಿಕ್ಷಕ, ಶಿಕ್ಷಕಿಯರು ಗುರುವಂದನೆಗೆ ಸಾಕ್ಷಿಯಾದರು. ಈ ಶಾಲೆಯಲ್ಲಿ ಶಿಕ್ಷಣ ನೀಡಿದ ಹಲವು ಶಿಕ್ಷಕ, ಶಿಕ್ಷಕಿಯರನ್ನು ಆತ್ಮೀಯವಾಗಿ ಗೌರವಿಸಿದರು.

ಶಾಲೆ ಮುಖ್ಯ ಶಿಕ್ಷಕಿ ವೇದಾವತಿಯವರು, ಸುಮಾರು 28 ವರ್ಷಗಳಿಂದ ಇದೆ ಶಾಲೆಯಲ್ಲಿ ಸೇವೆ ಮಾಡುತ್ತಿರುವುದರಿಂದ, ಮರಸು ಗ್ರಾಮದ ಮಗಳು/ಸೊಸೆ ಎಂದೆ ಗ್ರಾಮದಲ್ಲಿ ಪ್ರಖ್ಯಾತಿ ಹೊಂದಿದ್ದಾರೆ. ಅವರು ತಮ್ಮ ಅನಾರೋಗ್ಯ ಲೆಕ್ಕಿಸದೆ ಶತಮಾನ ಕಂಡ ಈ ಶಾಲೆಯಲ್ಲಿ ತಾವು ಶಿಕ್ಷಣ ನೀಡಿದ ವಿದ್ಯಾರ್ಥಿಗಳ ಬೆಳವಣಿಗೆ ಕಂಡು ಬೆರಗಾದರು. ಈ ಶಾಲೆಯಲ್ಲಿ ಶಿಕ್ಷಕ, ಶಿಕ್ಷಕಿಯರಾಗಿ ಸೇವೆ ಸಲ್ಲಿಸಿದ ಹಲವು ಶಿಕ್ಷಕ, ಶಿಕ್ಷಕಿಯರನ್ನು ಸಮಾರಂಭಕ್ಕೆ ಕರೆತರುವಲ್ಲಿ ಯಶಸ್ವಿಯಾದರು.



ಈ ಶಾಲೆಯಲ್ಲಿ ಶಿಕ್ಷಣ ಪಡೆದ ಅನೇಕ ವಿದ್ಯಾರ್ಥಿಗಳು ಪೊಲೀಸ್, ಶಿಕ್ಷಣ, ಕಂದಾಯ ಇಲಾಖೆ ಸೇರಿ ಹಲವು ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರೆಲ್ಲರೂ ಶಿಕ್ಷಣದ ಅಭಿವೃದ್ಧಿಗೆ ಹಲವು ಉಪಕರಣ ನೀಡುವುದರೊಂದಿಗೆ ತಮ್ಮ ಕೃತಜ್ಞತೆ ಅರ್ಪಿಸಿದರು.

ಸಮಾರಂಭದಲ್ಲಿ ಭಾಗವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಜೆ.ಕೃಷ್ಣೇಗೌಡರು, ತಾಲ್ಲೂಕಿನಲ್ಲಿ ಮರಸು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ವಿಶೇಷ ಮಹತ್ವವಿದೆ. ಮರಸು ಗ್ರಾಮ ಐತಿಹಾಸಿಕ ಹಿನ್ನೆಲೆಯುಳ್ಳ ಮತ್ತು ಜಾನಪದ ಕಲೆಯಾದಂತಹ ತೊಗಲು ಗೊಂಬೆ ಕಲೆ ಜನ್ಮ ಸ್ಥಳವಾಗಿದೆ. ತೊಗಲುಗೊಂಬೆ ಕಲಾವಿದರಾದ ಗೊಂಬೆರಾವಯ್ಯ ಎಂದೆ ಪ್ರಖ್ಯಾತಿ ಪಡೆ ದವರ ಮೊಮ್ಮಗ ಅಂತರ ರಾಷ್ಟ್ರೀಯ ಕಲಾವಿದ ಗುಂಡುರಾಜ್ ಅವರು ಮೂರನೆ ತಲೆಮಾರಿ ನವರು. ಇವರು ಕಲೆ ಮೂಲಕ ಮರಸು ಗ್ರಾಮವನ್ನು ಅಂತರರಾಷ್ಟ್ರ ಮಟ್ಟದಲ್ಲಿ ತೆರೆದಿಟ್ಟಿದ್ದಾರೆ ಎಂದರು.

1976 ರಿಂದ ಶಿಕ್ಷಕ ವೃತ್ತಿಯಲ್ಲಿ ಸುಧೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಶಿಕ್ಷಕಿ ಸಾವಿತ್ರಮ್ಮ ಅವರನ್ನು, ಅವರ ಮುದ್ದಿನ ವಿದ್ಯಾರ್ಥಿಗಳು ಉನ್ನತ ಅಧಿಕಾರದ ಸ್ಥಾನದಲ್ಲಿದ್ದರೂ, ಅವರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಹಳೆ ವಿದ್ಯಾರ್ಥಿಗಳಾದ ಸಬ್ ಇನ್ಸ್‌ಪೆಕ್ಟರ್ ಎಂ.ಎಲ್.ಸಿದ್ದೇಶ್ (ಲ್ಯಾಪ್ ಟಾಪ್), ಹಳೆ ವಿದ್ಯಾರ್ಥಿಗಳ ಒಕ್ಕೂಟದಿಂದ ಮರಸು ಮತ್ತು ಮರಸುಕೊಪ್ಪಲಿನ ಹಳೆ ವಿದ್ಯಾರ್ಥಿಗಳಿಂದ ಪ್ರಿಂಟರ್, ಆಕ್ವಾಗಾರ್ಡ್, ಮಹಾನಾಯಕ ಯುವಕರ ಬಳಗದಿಮದ ಎಲ್.ಇ.ಡಿ. ಟಿವಿ, 2012 ಬ್ಯಾಚ್ ವಿದ್ಯಾರ್ಥಿಗಳಿಂದ ಸ್ಟೌವ್, ತಟ್ಟೆ, ಲಯನ್ಸ್ ಕ್ಲಬ್ ಶಾಂತ ಕುಮಾರ್ 3 ಡೆಸ್ಕ್, ಜಗದೀಶ್ ರವರು ಆಲ್ಮೆರಾ ಕೊಡುಗೆಯಾಗಿ ನೀಡಿದರು.

ಸಮಾರಂಭದಲ್ಲಿ ಶಿಕ್ಷಕರಾದ ಎಚ್. ವೇದಾವತಿ, ರಜಿನಾಮೇರಿ, ಲತಾಮಣಿ, ಲಕ್ಷ್ಮೀಶ್, ಇಸಿಒ ಕಿರಣಕುಮಾರ್, ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ವರದರಾಜು, ಶಿಕ್ಷಕರ ಸಂಘದ ಪದಾಧಿಕಾರಿಗಳು, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು, ಪೋಷಕರು, ಗ್ರಾಮಸ್ಥರು ಭಾಗವಹಿಸಿದ್ದರು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

# ಅದ್ದೂರಿ ಅಡಿಬೈಲು ಶ್ರೀ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವ

• ಪ್ರಜೋದಯ ವರದಿ

**ಆಲೂರು:** ಕೆಂಚಮ್ಮನ ಹೊಸಕೋಟೆ ಮತ್ತು ಕುಂದೂರು ಹೋಬಳಿಗೆ ಸೇರಿದ 48 ಹಳ್ಳಿಗಳಿಗೆ ಸಂಬಂಧಿಸಿದ ಅಡಿಬೈಲು ಶ್ರೀ ರಂಗನಾಥಸ್ವಾಮಿ, ಬಿಂದಿಗಮ್ಮ ದೇವರ ಜಾತ್ರಾ ಮಹೋತ್ಸವ ವೈಭವದಿಂದ ನೆರವೇರಿತು.

ವಾರದಿಂದ ಪ್ರಾರಂಭವಾದ ಮೊದಲ ದಿನ ಶನಿವಾರ ದೊಡ್ಡ ಹರಿ ಸೇವೆ, ಭಾನುವಾರ, ಸೋಮವಾರ ಹಕ್ಕಿನ ಉತ್ಸವ, ಮಂಗಳವಾರ ಬಿಂದಿಗಮ್ಮ ಕಳಸ ಹೊರುವ ಪೂಜಾರಿ ಯವರಿಗೆ ತಲೆ ಬೋಳಿಸಲಾಯಿತು. ಅವರು ಜಾತ್ರಾ ಮಹೋತ್ಸವ ಮುಗಿಯುವವರೆಗೂ ಹಣ್ಣ- ಹಂಪಲು ಬಿಟ್ಟರೆ ಬೇರೆನನ್ನೂ ಸೇವಿಸದೆ ಪೂಜಾ ಕೈಂಕರ್ಯದಲ್ಲಿ ತೊಡಗುತ್ತಾರೆ.

ಬೆಟ್ಟದ ಮೇಲಿರುವ ರಂಗನಾಥ ಸ್ವಾಮಿ ದೇವಾಲಯದಲ್ಲಿ ಗುರುವಾರ ರಾತ್ರಿ ಬಿಂದಿಗಮ್ಮನವರಿಗೆ ಹಸೆ ಹಾಕಿ ವಿಶೇಷ ಪೂಜೆ ಸಲ್ಲಿಸಲಾಯಿತು. ಶುಕ್ರವಾರ ರಾತ್ರಿ ಗಂಡನ ಕಡೆ ಊರಾದ ಭರತೂರು ಹೊಳೆ ದಡಕ್ಕೆ ಉತ್ಸವ ಮೂರ್ತಿಯೊಂದಿಗೆ ಬಿಂದಿಗಮ್ಮನವರನ್ನು ಕರೆ ತರಲಾಯಿತು.

ಶನಿವಾರ ಹೊಳೆ ದಡದಲ್ಲಿ ನಡೆದ ಜಾತ್ರೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ಸಂಜೆ ಬಿಂದಿಗಮ್ಮನವರನ್ನು ಗಂಡನ ಮನೆಯಾದ



ರಂಗನಾಥಸ್ವಾಮಿ ದೇವಾಲಯಕ್ಕೆ ಕಳುಹಿಸುವ ಸಂದರ್ಭ ಆಕರ್ಷಣೀಯವಾಗಿತ್ತು. ಕಳಸ ಹೊರಡುವ ಮುನ್ನ ಕುಂದೂರಿನ ಗ್ರಾಮಸ್ಥರನ್ನು ಭರತೂರು ಗ್ರಾಮಸ್ಥರು ಬರಮಾಡಿಕೊಂಡು ವಿಶೇಷ ಆತಿಥ್ಯ ನೀಡಿ ಗೌರವಿಸಿದರು.

ಹೂವು ತುಳಸಿಯಿಂದ ಅಲಂಕೃತವಾದ ಹರಿವಾಣದಲ್ಲಿ ಬಿಂದಿಗಮ್ಮನವರ ಕಳಸವನ್ನು ಪೂಜಾರಿ ತಲೆ ಮೇಲೆ ಇಡಲಾಯಿತು. ಸ್ವಲ್ಪ ದೂರ ನಿಧಾನವಾಗಿ ನಡೆದು ಹೋಗುತ್ತಿದ್ದ ಕಳಸ ಹೊತ್ತವರು, ನಂತರದಲ್ಲಿ ತಲೆ ಮೇಲಿರುವ ಕಳಸವನ್ನು ಕೈಯಲ್ಲಿ ಹಿಡಿಯದೆ ಓಡಲು ಪ್ರಾರಂಭ ಮಾಡಿದರು. ಅಲ್ಲಿಂದ ಏಳು ಊರು ಬಾಗಿಲನ್ನು ದಾಟಿ ಕೊಂಡು, ಸುಮಾರು 10 ಕಿ. ಮೀ. ದೂರದ ಗುಡ್ಡದ ಮೇಲಿರುವ ದೇವಸ್ಥಾನಕ್ಕೆ ಕೇವಲ ಒಂದು ಗಂಟೆ ಸಮಯದಲ್ಲಿ ತಲುಪಿತು.

ಪ್ರತಿ ಊರು ಬಾಗಿಲು ಬಳಿ ಅಕ್ಕಿ ಹಸೆ ಬರೆದು ಹಣ ಹಾಕಿದ್ದರು. ಬಾಗಿಲು ದಾಟುವ ಸಂದರ್ಭದಲ್ಲಿ ಕಳಸ ಹೊತ್ತವರು ತನ್ನ ಗದ್ದದಿಂದ ನೆಲದ ಮೇಲಿಟ್ಟ ಹಣವನ್ನು ಮುಟ್ಟಿದರು. ಕಳಸ ಮುಂದೆ ಹೋದ ಕೂಡಲೇ ನೆರೆದಿದ್ದವರು ಹಸೆ ಅಕ್ಕಿಯನ್ನು ಮುಗಿಬಿದ್ದು ತೆಗೆದು ಕೊಂಡು ಪುನೀತರಾದರು.

ಭಾನುವಾರ ಬೆಟ್ಟದ ಮೇಲೆ ಹಗಲು ಜಾತ್ರೆ ನಡೆಯಿತು. ನೆರೆದಿದ್ದ ಸಾವಿರಾರು ಭಕ್ತರು ದೇವರ ದರ್ಶನ ಮಾಡಿ ಪುನೀತರಾದರು. ಭಕ್ತರಿಗೆ ಅನ್ನದಾನ ನೆರವೇರಿಸಲಾಯಿತು. ಹೊಳೆ ಬದಿಯಲ್ಲಿ ನಡೆದ ಬಿಂದಿಗಮ್ಮ



ಜಾತ್ರೆ ಸಂದರ್ಭದಲ್ಲಿ ಕೆಲವು ಭಕ್ತರು ವಿಶೇಷ ಹರಕೆ ಸಲ್ಲಿಸಿದರು.

ಸೋಮವಾರ ಹೇಮಾವತಿ ನದಿ ನೀರಿನಿಂದ ದೇವರಿಗೆ ಅಭಿಷೇಕ ಮಾಡುವುದರೊಂದಿಗೆ ಜಾತ್ರಾ ಕಾರ್ಯಕ್ರಮಕ್ಕೆ ನಾಂದಿ ಹಾಡಲಾಗುತ್ತದೆ. ನಂತರ ಯುಗಾದಿ ಹಬ್ಬದ ಸಂದರ್ಭದಲ್ಲಿ ಭರತೂರು ಕಡೆಗೆ ಸೇರುವ ಸುಮಾರು 10 ಗ್ರಾಮಗಳಲ್ಲಿ ಅಡ್ಡೆ ಉತ್ಸವ ನಡೆಯುತ್ತದೆ.

ಜಾತ್ರೆ ಸಂದರ್ಭದಲ್ಲಿ ಕಂದಾಯ, ಪೊಲೀಸ್, ಅರಣ್ಯ ಮತ್ತು ಆರೋಗ್ಯ ಇಲಾಖೆ ಸಿಬ್ಬಂದಿಗಳು, ಭಕ್ತರಿಗೆ ತೊಂದರೆಯಾಗದಂತೆ ವ್ಯವಸ್ಥೆ ಕಲ್ಪಿಸಿದ್ದರು. ಅಡಿಬೈಲು ಶ್ರೀ ರಂಗನಾಥ ಸ್ವಾಮಿ ಜಾತ್ರೆ ಅಂಗವಾಗಿ ಭರತೂರು ಹೊಳೆಬದಿ ಜಾತ್ರೆ ಮುಕ್ತಾಯಗೊಂಡ ನಂತರ, ಶನಿವಾರ ಸಂಜೆ ಬಿಂದಿಗಮ್ಮ ಕಳಸವನ್ನು ಅರ್ಚಕ ಶಾಂತರಾಜು ರವರು ನೆತ್ತಿ ಮೇಲೆ ಕೈಯಲ್ಲಿ ಹಿಡಿಯದೆ 10 ಕಿ. ಮೀ. ಹೊತ್ತು, ಊರ ಬಾಗಿಲು ಬಳಿ ಹಸೆಯಲ್ಲಿ ಹಾಕಿದ್ದ ಹಣವನ್ನು ಗದ್ದದಿಂದ ಮುಟ್ಟುತ್ತಿರುವುದು. ಬೆಟ್ಟದ ಮೇಲಿನ ಶ್ರೀ ರಂಗನಾಥಸ್ವಾಮಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.



# ನಿರಾಶಾದಾಯಕ ಬಜೆಟ್ : ಸಿದ್ದರಾಮಯ್ಯ

• ಪ್ರಜೋದಯ ವರದಿ

**ಕಲಬುರಗಿ :** ಇದು ದೂರದೃಷ್ಟಿ ಇಲ್ಲದ, ನಿರಾಶಾದಾಯಕ ಬಜೆಟ್. ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ರಾಜ್ಯಕ್ಕೆ ಬರೀ ಚೊಂಬು ಕೊಟ್ಟಿದೆ. ಕೇವಲ ಕರ್ನಾಟಕವಲ್ಲ, ಇಡೀ ದಕ್ಷಿಣ ಭಾರತಕ್ಕೇ ಏನೂ ಕೊಟ್ಟಿಲ್ಲವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟೀಕಿಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡೀ ಬಜೆಟ್ ತುಂಬ ವಿಕಸಿತ ಭಾರತದ ಬಗೆಗೆ ಪ್ರಸ್ತಾಪವಿದೆ. ಅದು ಬರೀ ಮಾತಿನಲ್ಲಿದೆ. ಅದನ್ನು ಕೃತಿಗೆ ಇಳಿಸುವ ಯಾವುದೇ ಯೋಜನೆಗಳಿಲ್ಲ ಎಂದು ಕಲಬುರಗಿ ವಿಮಾನ ನಿಲ್ದಾಣದಲ್ಲಿ ಹರಿಹಾಯ್ದರು.

ಭದ್ರಾ ಮೇಲ್ದಂಡೆ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳಾಗಿ ಘೋಷಿಸುವಂತೆ ನಾವು ಕೇಳಿದ್ದೆವು. ಅದರ, ಬಗ್ಗೆ ಒಂದೂ ಪದವಿಲ್ಲ. 202324ರಲ್ಲಿ ಬಜೆಟ್‌ನಲ್ಲಿ ನಿರ್ಮಲಾ ಸೀತಾರಾಮನ್, ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ಘೋಷಿಸಿದ್ದರು. ಈತನಕ ಒಂದೂ ರೂಪಾಯಿ ಕೊಟ್ಟಿಲ್ಲವೆಂದರು.

ತೆರಿಗೆ ಪಾಲು ಹಂಚಿಕೆಯಲ್ಲಿ ಕೇಂದ್ರವು ಅನ್ಯಾಯ ಮುಂದುವರಿಸಿದೆ. ನಾವು ಕನಿಷ್ಠ 14ನೇ ಹಣಕಾಸು ಆಯೋಗದಲ್ಲಿ ನಿಗದಿಯಾಗಿದ್ದ



ಶೇ.4.71ರಷ್ಟಾದರೂ ಕೊಡಿ ಎಂದು 16ನೇ ಹಣಕಾಸು ಆಯೋಗದ ಎದುರು ವಾದ ಮಂಡಿಸಿದ್ದೆವು. ತೆರಿಗೆ ಹಂಚಿಕೆಯಲ್ಲಿ ನ್ಯಾಯಯುತ ಪಾಲಿಗಾಗಿ ಪ್ರಧಾನಿ, ಕೇಂದ್ರ ಹಣಕಾಸು ಸಚಿವರನ್ನು ಭೇಟಿಯಾಗಿ ಮನವಿ ಮಾಡಿದ್ದೆವು. ಆದರೂ, ತೆರಿಗೆಯಲ್ಲಿ ಬರೀ ಶೇ 4.13ರಷ್ಟು ಪಾಲು ಕೊಡಲಾಗಿದೆ. ನಗರ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಐದು ವರ್ಷಗಳಿಗೆ ರಾಜ್ಯಕ್ಕೆ ಕೇವಲ ತಲಾ 18 ಸಾವಿರ ಕೋಟಿಗಳಷ್ಟು ಹಂಚಿಕೆ ಮಾಡಿದೆ. ಜಿಎಸ್‌ಟಿಯಲ್ಲಿ ರಾಜ್ಯವು ದೇಶದಲ್ಲೇ 2ನೇ ಸ್ಥಾನದಲ್ಲಿದೆ. ಕರ್ನಾಟಕದಿಂದ ವರ್ಷಕ್ಕೆ 4.50 ಲಕ್ಷ ಕೋಟಿಗಳಷ್ಟು ತೆರಿಗೆ ಕೇಂದ್ರಕ್ಕೆ ಹೋಗುತ್ತದೆ. ರಾಜ್ಯ ಒಂದು ರೂಪಾಯಿ ತೆರಿಗೆ ಕಟ್ಟಿದರೆ ಬರೀ 14 ಪೈಸೆ ತೆರಿಗೆ ರೂಪದಲ್ಲಿ ಕೊಡುತ್ತಿದೆ. ಇದು ಅನ್ಯಾಯವಲ್ಲವೇ ಎಂದು ಪ್ರಶ್ನಿಸಿದರು.

ಬೆಂಗಳೂರು-ಮುಂಬೈ, ಬೆಂಗಳೂರು-ಪುಣೆ, ಬೆಂಗಳೂರು-ಮಂಗಳೂರು ಹೈಸ್ಪೀಡ್ ರೈಲು ಕೇಳಿದ್ದೆವು. ಕಲ್ಯಾಣ ಕರ್ನಾಟಕಕ್ಕೆ 371 (ಜೆ) ಅಡಿ 5 ಸಾವಿರ ಕೋಟಿ ಮ್ಯಾಚಿಂಗ್ ಗ್ರ್ಯಾಂಟ್, ರಾಯಚೂರಿಗೆ ಏಮ್ಸ್, ಕಬ್ಬು, ತೊಗರಿ, ಬೇಳೆಕಾಳುಗಳಿಗೆ ಆರ್ಥಿಕ ನೆರವು ಕೇಳಿದ್ದೆವು. ಅದಕ್ಕೂ ಏನೂ ಕೊಟ್ಟಿಲ್ಲ. ಕೃಷ್ಣಾ ನದಿ ನೀರು ಹಂಚಿಕೆ ಬಗೆಗೆ ಗ್ಯಾಜೆಟ್ ಅಧಿಸೂಚನೆ ಹೊರಡಿಸಿಲ್ಲ. ಮೇಕೆದಾಟು ಯೋಜನೆಗೆ ಅನುಮತಿ ಕೊಟ್ಟಿಲ್ಲ. ಮಹಾದಾಯಿ ಯೋಜನೆಗೆ ಪರಿಸರ ಸಚಿವಾಲಯದ ಅನುಮತಿ ಕೊಟ್ಟಿಲ್ಲವೆಂದರು.

## ವರದಕ್ಷಿಣೆ ಕಿರುಕುಳ: ಮಹಿಳೆ ಆತ್ಮಹತ್ಯೆ

• ಪ್ರಜೋದಯ ವರದಿ

**ಹಾಸನ:** ವರದಕ್ಷಿಣೆ ಕಿರುಕುಳ ತಾಳಲಾರದೆ ಮಹಿಳೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹೆಚ್. ವೈ ಲ ನ ಹ ಳ್ಳಿ ಗ್ರಾಮದಲ್ಲಿ ನಡೆದಿದೆ.



ಹುಣಸಿಕೆರೆ ಗ್ರಾಮದ ಲಕ್ಷ್ಮಣ ಅವರ ಪುತ್ರಿ ಪ್ರಿಯಾ (24) ಮೃತ ದುರ್ದೈವಿ. ಮೈಲನಹಳ್ಳಿಯ ಹೊನ್ನಯ್ಯ ಹಾಗು ಶಂಕರಮ್ಮ ಅವರ ಪುತ್ರ ಸ್ವಾಮಿ ಎಂಬಾತನಿಗೆ ಕೊಟ್ಟು ನಾಲ್ಕು ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿದ್ದರು. ವಿವಾಹದ ಆರಂಭದಲ್ಲಿ ದಾಂಪತ್ಯ ಜೀವನ ಚೆನ್ನಾಗಿತ್ತಾದರೂ ಇತ್ತೀಚೆಗೆ ವರ ದಕ್ಷಿಣೆ ಕಿರುಕುಳ ನೀಡುತ್ತಿದ್ದರು. ಮದುವೆ ಸಂದರ್ಭದಲ್ಲಿ 14 ಗ್ರಾಂ ತೂಕದ ಒಂದು ಚಿನ್ನದ ಗುಂಡಿನ ಸರ, 10 ಗ್ರಾಂ ತೂಕದ ಒಂದು ಜೊತೆ ಚಿನ್ನದ ಕಿವಿ ಓಲೆ, 3 ಗ್ರಾಂ ತೂಕದ ಚಿನ್ನದ ಕಿವಿಯ ಮಾಟಿ, 3 ಗ್ರಾಂ ತೂಕದ ಚಿನ್ನದ ಕಾಸು, 15 ಗ್ರಾಂನ 4 ಚಿನ್ನದ ಉಂಗುರ, 15 ಗ್ರಾಂನ ಬೆಳ್ಳಿಯ ಕಾಲುಂಗುರ ಮತ್ತು ಕಾಲು ಚೈನನ್ನು ಹಾಗು 1.30 ಲಕ್ಷ ರೂ. ವರದಕ್ಷಿಣೆ ನೀಡಲಾಗಿತ್ತು. ಆದರೂ ತವರಿನಿಂದ ಮತ್ತಷ್ಟು ವರದಕ್ಷಿಣೆ ತರು ವಂತೆ ಪತಿ ಸ್ವಾಮಿ, ಮಾವ ಹೊನ್ನಯ್ಯ, ಅತ್ತೆ ಶಂಕರಮ್ಮ ಹಾಗು ಮಗಳು ಪುಟ್ಟಿ ತೊಂದರೆ ನೀಡುತ್ತಿದ್ದರು ಎನ್ನ ಲಾಗಿದೆ. ತನಗಾಗುತ್ತಿರುವ ಮಾನಸಿಕ ಕಿರುಕುಳದ ಕುರಿತು ಪ್ರಿಯಾ ತವರಿನ ಸಂಬಂಧಿಕರಿಗೆ ತಿಳಿಸಿದ್ದಳು. ಆಗ ಲಕ್ಷ್ಮಣ ಅವರು ಅಳಿಯ ಸ್ವಾಮಿಗೆ ಕರೆ ಮಾಡಿ ಮಗಳಿಗೆ ಹಿಂಸೆ ನೀಡ ಬೇಡಿ ಎಂದು ಮನವಿ ಮಾಡಿ ದ್ದರು. ಜ. 30ರಂದು ತಂದೆಗೆ ಕರೆ ಮಾಡಿದ್ದ ಪ್ರಿಯಾ, ತನ್ನನ್ನು ಕರೆದು ಕೊಂಡು ಹೋಗುವಂತೆ ಹೇಳಿದ್ದಳು. ಆ ಬಳಿಕ ಅಳಿಯ ಸ್ವಾಮಿ ಫೋನ್ ಮಾಡಿ ನಿಮ್ಮ ಮಗಳನ್ನು ಆಸ್ಪತ್ರೆಗೆ ಸೇರಿಸಿದ್ದೇನೆ, ಬೆಳಿಗ್ಗೆ ಬನ್ನಿ ಎಂದು ಹೇಳಿದ್ದ. ಆಸ್ಪತ್ರೆಗೆ ಬಂದು ನೋಡಿ ದಾಗ ಪ್ರಿಯಾ ಮೃತಪಟ್ಟಿರುವ ವಿಚಾರ ತಿಳಿದಿದೆ. ವರದಕ್ಷಿಣೆ ಕಿರುಕುಳ ಸಹಿಸಲಾಗದೆ ಮಗಳು ವಿಷ ಸೇವಿಸಿ ಸಾವಿಗೆ ಶರಣಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕೆಂದು ಲಕ್ಷ್ಮಯ್ಯ ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ಶೌಚಾಲಯ ನಿರ್ವಹಣೆ: ಟೀಕೆಗೆ ಗುರಿಯಾದ ಪ್ರಶಂಸಾ ಪತ್ರ

» ನಾಲ್ಕನೇ ಪುಟದಲ್ಲಿ

ಇತ್ತೀಚೆಗೆ ನಡೆದ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜನಸ್ಪಂದನಾ ಸಭೆಯಲ್ಲಿ ಯುವಕರು ಈ ಬಗ್ಗೆ ಮಾಹಿತಿ ನೀಡಿದ್ದರು. ನಗರದ ಬಹುತೇಕ ಸಾರ್ವಜನಿಕ ಶೌಚಾಲಯಗಳು ಸ್ಥಗಿತಗೊಂಡಿವೆ. ಅವುಗಳ ಬಾಗಿಲು ತೆರೆಸಬೇಕೆಂದು ಕೋರಿದ್ದರು.

ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಹಾನಗರ ಪಾಲಿಕೆ ಪೌರಾಯುಕ್ತ ಆರ್.ಕೃಷ್ಣಮೂರ್ತಿ ಅವರಿಗೆ ಸೂಚಿಸಿ ದ್ದರು. ಆದರೆ, ಶೌಚಾಲಯಗಳ ಬಾಗಿಲು ಮಾತ್ರ ತೆರೆದಿಲ್ಲ. ಸ್ವಚ್ಛ ಭಾರತ್ ಅಭಿಯಾನದಡಿ ಸುಸ್ಥಿರ ನೈರ್ಮಲ್ಯದಡಿ ಪಾಲಿಕೆಗೆ ಪ್ರಶಂಸೆ ನೀಡಿರುವ ಅಧಿಕಾರಿಗಳು ಎಲ್ಲಿ ಮತ್ತು ಹೇಗೆ ಸಮೀಕ್ಷೆ ಮಾಡಿದೆಂಬುದು ಯಕ್ಷ ಪ್ರಶ್ನೆಯಾಗಿದೆ. ಹಾಸನ ನಗರಸಭೆಯಿಂದ ಮಹಾ ನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದೆ. ನಗರದ 35 ವಾರ್ಡ್‌ಗಳು ಮಾತ್ರವಲ್ಲದೆ ಸುತ್ತಲಿನ 37 ಹಳ್ಳಿಗಳು ಸೇರ್ಪಡೆಯಾಗಿವೆ. ಗ್ರಾಮೀಣ ಭಾಗದ ಅನೇಕ ಕಡೆ ಬಯಲು ಶೌಚಾಲಯ ಈಗಲೂ ಮುಂದುವರಿದಿದೆ. ವೈಯಕ್ತಿಕ ಶೌಚಾಲಯ ನಿರ್ಮಾಣದಲ್ಲಿ ಮಹಾನಗರ ಪಾಲಿಕೆ ಶೇ. 100 ರಷ್ಟು ಗುರಿ ಸಾಧಿಸಿರುವುದು ಹೇಗೆ ಸಾಧ್ಯವೆಂಬುದು ಅರ್ಥವಾಗುತ್ತಿಲ್ಲ.

ಮಾರುಕಟ್ಟೆ, ಸರ್ಕಾರಿ ಕಚೇರಿ ಕೆಲಸ, ಎಪಿಎಂಸಿ, ಶಾಲಾ ಕಾಲೇಜಿಗೆ ತೆರಳಲು ನಿತ್ಯ ಸಾವಿರಾರು ಜನರು ನಗರಕ್ಕೆ ಭೇಟಿ ನೀಡುತ್ತಾರೆ. ಆದರೆ, ಸೂಕ್ತ ಶೌಚಾಲಯಗಳು ನಗರದಲ್ಲಿ ಇಲ್ಲ. ಆದರೂ ಪ್ರಶಂಸೆಗೆ ಪಾಲಿಕೆ ಪಾತ್ರವಾಗಿದೆ. ನಗರದ ಕಲಾ ಕಾಲೇಜು ಸಮೀಪದಲ್ಲಿರುವ ಸಾರ್ವಜನಿಕ ಶೌಚಾಲಯ ಬಾಗಿಲು ಹಾಕಿ ದಶಕಗಳೇ ಕಳೆದಿವೆ. ಜಿಲ್ಲಾ ಕ್ರೀಡಾಂಗಣ, ರಾಜಕುಮಾರ್ ನಗರ, ಚಿಪ್ಪಿನಕಟ್ಟೆ, ಅಮಿರ್ ಮೊಹಲ್ಲಾ ಸೇರಿ ವಿವಿಧೆಡೆ ಶೌಚಾಲಯ ನಿರ್ಮಿಸಲಾಗಿದೆಯಾದರೂ ಅದರ ಬಳಕೆ ಮಾತ್ರ ಆಗುತ್ತಿಲ್ಲ. ಸಾರ್ವಜನಿಕರು ಅನಿವಾರ್ಯವಾಗಿ ಬಯಲಿನಲ್ಲೇ ಜಲಭಾದೆ ತೀರಿಸಿಕೊಳ್ಳುವಂತಾಗಿದೆ.

# ವಿವಿಧ ಕಾಮಗಾರಿಗೆ ಶಾಸಕ ಸ್ವರೂಪ್ ಭೂಮಿ ಪೂಜೆ

• ಪ್ರಜೋದಯ ವರದಿ

**ಹಾಸನ:** ನಗರದ ವಿವಿಧೆಡೆ ಭಾನುವಾರ 50 ಲಕ್ಷ ರೂ. ವೆಚ್ಚದ ವಿವಿಧ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಭಾನುವಾರ ಭೂಮಿಪೂಜೆ ನೆರವೇರಿಸಿದರು.

ದೊಡ್ಡಮಂಡಿಗನಹಳ್ಳಿ ಬಳಿ 25 ಲಕ್ಷ ರೂ. ವೆಚ್ಚದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಯಿತು. ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಸ್ಥಳೀಯರು, ಪಕ್ಷದ ಮುಖಂಡರು ಪಟಾಕಿ ಸಿಡಿಸಿ ಶಾಸಕ ಸ್ವರೂಪ್ ಅವರನ್ನು ಸ್ವಾಗತಿಸಲಾಯಿತು.

ಬಳಿಕ ವಿಜಯನಗರದಲ್ಲಿ ಸಮುದಾಯ ಭವನ ನಿರ್ಮಾಣ, 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಕಾರಾಳಮ್ಮ ದೇವಸ್ಥಾನ ಕಟ್ಟಡ ಕಾಮಗಾರಿ, ದೊಡ್ಡಮಂಡಿಗನಹಳ್ಳಿ ಮತ್ತು ವಿಜಯನಗರ ಬಡಾವಣೆಗೆ ಕುಡಿಯುವ ನೀರಿನ ಸಮಸ್ಯೆ ನೀಗಿಸಲು 50 ಲಕ್ಷ ರೂ. ವೆಚ್ಚದ ಒಂದು ಲಕ್ಷ ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.



ದೊಡ್ಡಮಂಡಿಗನ ಹಳ್ಳಿ ಗ್ರಾಮಸ್ಥರು, ಬೌದ್ಧ ಮಹಾಸಭಾ ಪದಾಧಿಕಾರಿಗಳು, ಸಿದ್ದಾರ್ಥ ಸೊಸೈಟಿ ಸದಸ್ಯರು ಹಾಜರಿದ್ದರು.

### ಜಿಎಸ್‌ಟಿ ಸಂಗ್ರಹದಲ್ಲಿ ಭಾರೀ ಏರಿಕೆ

• ಮೊದಲನೇ ಪುಟದಿಂದ

ಜನವರಿಯಲ್ಲಿ ಸುಮಾರು 1.71 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಜನವರಿಯಲ್ಲಿ (ತಂಬಾಕು ಉತ್ಪನ್ನಗಳಿಂದ) ಸೆಸ್ ಸಂಗ್ರಹವು 5,768 ಕೋಟಿ ರೂ.ಗಳಷ್ಟಿತ್ತು. ಕಳೆದ ವರ್ಷ ಜನವರಿಯಲ್ಲಿ ಕಾರುಗಳು, ತಂಬಾಕು ಉತ್ಪನ್ನಗಳಂತಹ ಐಷಾರಾಮಿ, ಪಾಪ ಮತ್ತು ಅನರ್ಹ ಸರಕುಗಳ ಮೇಲೆ ಸೆಸ್ ವಿಧಿಸಿದಾಗ ಇದು ರೂ. 13,009 ಕೋಟಿ ಸಂಗ್ರಹಕ್ಕೆ ಹೋಲಿಸಿದರೆ.ಸೆಪ್ಟೆಂಬರ್ 22, 2025 ರಿಂದ ಜಾರಿಗೆ ಬರುವಂತೆ, ಸುಮಾರು 375 ವಸ್ತುಗಳ ಮೇಲಿನ ಜಿಎಸ್‌ಟಿ ದರಗಳನ್ನು ಕಡಿತಗೊಳಿಸಲಾಯಿತು, ಇದು ಸರಕುಗಳನ್ನು ಅಗ್ಗವಾಗಿಸಿತು.


**ನಗರಸಭಾ ಕಾರ್ಯಾಲಯ, ಅರಸೀಕೆರೆ.**

ದೂ ಸಂ: 08174-232201 ಫ್ಯಾಕ್ಸ್ ನಂ: 08174-233274 ಈ ಮೇಲ್ ವಿಳಾಸ: itstaff_ulb_arasikere@yahoo.com ವೆಬ್‌ಸೈಟ್ ವಿಳಾಸ: www.arasikeretown.mrc.gov.in

ನಂ:ನ.ಸ.ಅ./ಕಂ.ನಿ./ಸಿ.ಆರ್/ /2025-26 ದಿನಾಂಕ: 28.01.2026

**: : ಸಾರ್ವಜನಿಕ ಪ್ರಕಟಣೆ : :**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಅರಸೀಕೆರೆ ನಗರಸಭಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲೆಗಳ ಇ-ಆಸ್ತಿ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿರುವುದರಿಂದ ಈ ಕೆಳಕಂಡ ಶಾಲೆಗಳ ಮಾಹಿತಿ ಕಛೇರಿ ದಾಖಲೆಯಲ್ಲಿರುವಂತೆ ಮತ್ತು ಸ್ಥಳದಲ್ಲಿ ಇರುವಂತೆ ಈ ಕೆಳಗೆ ಮಾಹಿತಿ ಇದ್ದು, ಈ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದ್ದು, ಆಕ್ಷೇಪಣೆಗಳಿದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ಫೆಬ್ರವರಿ 03 ರಂದು ಸಂಜೆ 4-00 ಗಂಟೆಯೊಳಗೆ ಅರಸೀಕೆರೆ ನಗರಸಭಾ ಕಾರ್ಯಾಲಯಕ್ಕೆ ಲಿಖಿತವಾಗಿ ಸಲ್ಲಿಸುವುದು. ನಂತರ ಸೀಕೃತವಾದ ಯಾವುದೇ ಆಕ್ಷೇಪಣೆ ಪರಿಗಣಿಸುವುದಿಲ್ಲವೆಂದು ನಗರಸಭಾ ಕಾರ್ಯಾಲಯ, ಪೌರಾಯುಕ್ತರು ತಿಳಿಸಿರುತ್ತಾರೆ.

| ಕ್ರ.ಸಂ. | ವಾರ್ಡ್ ಸಂಖ್ಯೆ | ಖಾತೆ ಸಂಖ್ಯೆ | ಶಾಲೆಯ ಹೆಸರು ಮತ್ತು ವಿಳಾಸ | ಸ್ಥಳದಲ್ಲಿರುವ ಒಟ್ಟು ವಿಸ್ತೀರ್ಣ (ಚ.ಅಡಿ) | ಕಟ್ಟಡದ ವಿಸ್ತೀರ್ಣ (ಚ.ಅಡಿ) | ಚಕ್ಕುಬಂಧಿ |
|---|---|---|---|---|---|---|
| 1 | 04 | 10744ಎ | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜೇನುಕಲ್ ನಗರ | 9250 ಚ.ಅಡಿ | ನೆಲ ಅಂತಸ್ತು - 1290<br>ನೆಲ ಅಂತಸ್ತು - 550<br>ನೆಲ ಅಂತಸ್ತು - 1536<br>ಮೊದಲನೇ ಅಂತಸ್ತು - 1536 | ಪೂರ್ವ : ಅಗ್ನಿಶಾಮಕ ಧಳ ಕಛೇರಿ<br>ಪಶ್ಚಿಮ : ನಗರಸಭಾ ರಸ್ತೆ<br>ಉತ್ತರ : ನಗರಸಭಾ ರಸ್ತೆ<br>ದಕ್ಷಿಣ : ನಗರಸಭಾ ರಸ್ತೆ |
| 2 | 02 | 72/8445/3301 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾಸನ ರಸ್ತೆ ಎಡಭಾಗ | 3734 ಚ.ಅಡಿ | ನೆಲ ಅಂತಸ್ತು - 1960<br>ಮೊದಲನೇ ಅಂತಸ್ತು - 1960<br>ನೆಲ ಅಂತಸ್ತು - 500<br>ಮೊದಲನೇ ಅಂತಸ್ತು - 500<br>ನೆಲ ಅಂತಸ್ತು - 500<br>ಮೊದಲನೇ ಅಂತಸ್ತು - 500 | ಪೂರ್ವ : ಖಾಸಗಿರವರ ಕಟ್ಟಡ<br>ಪಶ್ಚಿಮ : ಹಾಸನ ರಸ್ತೆ<br>ಉತ್ತರ : ಖಾಸಗಿಯವರ ನಿವೇಶನ<br>ದಕ್ಷಿಣ : ನಗರಸಭಾ ರಸ್ತೆ |
| 3 | 05 | 10339 | ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ಹಾಸನ ರಸ್ತೆ ಬಲಭಾಗ, 10 ನೇ ಕ್ರಾಸ್ | 400 ಚ.ಅಡಿ | ನೆಲ ಅಂತಸ್ತು-1650 | ಪೂರ್ವ : ಖಾಸಗಿ ನಿವೇಶನ<br>ಪಶ್ಚಿಮ : ಖಾಸಗಿ ಕಟ್ಟಡ<br>ಉತ್ತರ : ಖಾಸಗಿ ಕಟ್ಟಡ<br>ದಕ್ಷಿಣ : ರಸ್ತೆ |
| 4 | 24 | 4079 | ಆರ್ ಆರ್ ರಸ್ತೆ, ಬಾಲಕಿಯರ ಸರ್ಕಾರಿ ಪದವಿ ಕಾಲೇಜು ಮತ್ತು ಪ್ರೌಢಶಾಲೆ | 16469 ಚ.ಅಡಿ | ನೆಲ ಅಂತಸ್ತು -10962<br>ಮೊದಲನೇ ಮಹಡಿ- 10962 | ಪೂರ್ವ : ಖಾಸಗಿ ನಿವೇಶನ<br>ಪಶ್ಚಿಮ : ಸರ್ಕಾರಿ ಆಸ್ಪತ್ರೆ ಜಾಗ<br>ಉತ್ತರ : ಬಿ.ಹೆಚ್.ರಸ್ತೆ<br>ದಕ್ಷಿಣ : ಸರ್ಕಾರಿ ಆಸ್ಪತ್ರೆ ಜಾಗ |
| 5 | 18 | 2497 | ಜಿ.ಹೆಚ್.ಪಿ.ಎಸ್. ಪೆಟ್ಟಾ ಶಾಲೆ, ಬಿ.ಹೆಚ್.ರಸ್ತೆ | 6817 ಚ.ಅಡಿ | ನೆಲ ಅಂತಸ್ತು - 1630<br>ನೆಲ ಅಂತಸ್ತು - 459 | ಪೂರ್ವ : ಖಾಸಗಿಯವರ ನಿವೇಶನ<br>ಪಶ್ಚಿಮ : ಆಸ್ಪತ್ರೆ ಜಾಗ<br>ಉತ್ತರ : ಬಿ.ಹೆಚ್.ರಸ್ತೆ<br>ದಕ್ಷಿಣ : ಆಸ್ಪತ್ರೆ ಜಾಗ |
| 6 | 24 | 4076/5832 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಿ ಹೆಚ್ ರಸ್ತೆ | 41801.87 ಚ.ಅಡಿ | ನೆಲ ಅಂತಸ್ತು 1560<br>ನೆಲ ಅಂತಸ್ತು 3025 | ಪೂರ್ವ: ಸರ್ಕಾರಿ ಬಾಲಕಿಯರ ಶಾಲೆ ಜಾಗ<br>ಪಶ್ಚಿಮ : ರಸ್ತೆ<br>ಉತ್ತರ : ಬಿ ಹೆಚ್ ರಸ್ತೆ<br>ದಕ್ಷಿಣ : ಖಾಸಗಿರವರ ಜಾಗ |
| 7 | 15 | 392 | ಜಿ ಎಲ್ ಪಿ ಎಸ್, ಬಿ ಜಿ ಹಟ್ಟಿ | 3267 ಚ.ಅಡಿ | ನೆಲ ಅಂತಸ್ತು-575<br>ನೆಲ ಅಂತಸ್ತು- 100 | ಪೂರ್ವ : ಖಾಸಗಿ ನಿವೇಶನ<br>ಪಶ್ಚಿಮ : ರಸ್ತೆ<br>ಉತ್ತರ : ರಸ್ತೆ<br>ದಕ್ಷಿಣ : ಪರ್ವಿನ್ ತಾಜ್ ರವರ ಮನೆ |
| 8 | 24 | 247/5826/6853 | ಸರ್ಕಾರಿ ಪ್ರಾಥಮಿಕ ಶಾಲೆ, ಬಸ್ತಿಗುಡಿ ಬೀದಿ | 1) 7.35 x 12.35<br>2) 21.35 x 5.35<br>3) 35 x 5.35 ಮೀ | ನೆಲ ಅಂತಸ್ತು -3200<br>ನೆಲ ಅಂತಸ್ತು- 4000 | ಪೂರ್ವ : ನಗರಸಭೆ ರಸ್ತೆ<br>ಪಶ್ಚಿಮ : ಬಿ ಹೆಚ್ ರಸ್ತೆ<br>ಉತ್ತರ : ನಗರಸಭೆ ರಸ್ತೆ<br>ದಕ್ಷಿಣ : ಪಿ ಡಬ್ಲೂಡಿ ಕ್ವಾಟ್ರಸ್ |
| 9 | 29 | 75/5860/6887 | ಸರ್ಕಾರಿ ಹೊಸಹಿರಿಯ ಪ್ರಾಥಮಿಕ ಶಾಲೆ, ಬಿ ಹೆಚ್ ರಸ್ತೆ, ಸಾಧನ ಟಾಕೀಸ್ ಎದರು | 7611 ಚ.ಅಡಿ. | ನೆಲ ಅಂತಸ್ತು 6500 * 103.50 + 61+50/2 ಮೀ | ಪೂರ್ವ : ಮೌಲಾನ ಆಜಾದ್ ಶಾಲೆ<br>ಪಶ್ಚಿಮ : ಬಿ ಹೆಚ್ ರಸ್ತೆ<br>ಉತ್ತರ : ಬಿ ಆರ್ ಸಿ ಆಫೀಸ್<br>ದಕ್ಷಿಣ : ಗುರುಭವನ |
| 10 | 31 | 374/6568/6946 | ಸರ್ಕಾರಿ ಪ್ರೌಢಶಾಲೆ, ಮಾರುತಿ ನಗರ | 641.91 ಚ.ಅಡಿ | ನೆಲ ಅಂತಸ್ತು 3200 | ಪೂರ್ವ : ರಸ್ತೆ<br>ಪಶ್ಚಿಮ : ಬಿ ಹೆಚ್ ರಸ್ತೆ<br>ಉತ್ತರ : ಕೆ ಇ ಬಿ ಆಫೀಸ್<br>ದಕ್ಷಿಣ : ರಸ್ತೆ |
| 11 | 19 | 12-201-32 | ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಮುಜಾವರ್ ಮೊಹಲ್ಲಾ | 6776 ಚ.ಅಡಿ | ನೆಲ ಅಂತಸ್ತು 2968 | ಪೂರ್ವ : ರಸ್ತೆ<br>ಪಶ್ಚಿಮ : ಖಾಸಗಿಯವರ ಜಾಗ<br>ಉತ್ತರ : ರಸ್ತೆ<br>ದಕ್ಷಿಣ : ರಸ್ತೆ |

ಸಹಿ/-(ಹೆಚ್.ಟಿ. ಕೃಷ್ಣಮೂರ್ತಿ)
ಪೌರಾಯುಕ್ತರು ನಗರಸಭೆ ಅರಸೀಕೆರೆ.

ವಾಸಾಸಂಇ/ಹಿಸವಿ/ಹಾಸನ/1002/ಕೆಎಸ್‌ಎಂಸಿಎ/2025-26


# ಗ್ರಾ.ಪಂ. ಅಭಿವೃದ್ಧಿಗೆ ಹೆಚ್ಚುವರಿ ಅನುದಾನಕ್ಕೆ ಆಗ್ರಹ

• ಪ್ರಜೋದಯ ವರದಿ

**ಆಲೂರು:** ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿ ಮೂಲಸೌಕರ್ಯ ಕಲ್ಪಿಸಿಕೊಳ್ಳಲು ಸರ್ಕಾರ ಹೆಚ್ಚಿನ ಅನುದಾನ ನೀಡಬೇಕು ಹಾಗು ಸ್ಥಳೀಯವಾಗಿ ಸಂಪನ್ಮೂಲ ಕ್ರೂಢೀಕರಣಕ್ಕೆ ಆದ್ಯತೆ ನೀಡಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಸಲಹೆ ನೀಡಿದರು.

ತಾಲ್ಲೂಕಿನ ಬೈರಾಪುರ ಗ್ರಾಮ ಪಂಚಾಯಿತಿ ರಾಜೀವ್ ಗಾಂಧಿ ಸೇವಾ ಕೇಂದ್ರ ಕಟ್ಟಡದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದಲ್ಲಿ ರೈತರು, ಕಾರ್ಮಿಕರು, ಬಡವರು, ದೀನ ದಲಿತರು ತಮ್ಮ ಕೆಲಸ ಕಾರ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮ ಪಂಚಾಯಿತಿಗಳನ್ನು ಅವಲಂಬಿಸಿರುತ್ತಾರೆ. ಜನಪ್ರತಿನಿಧಿಗಳು ಜನರ ಋಣ ತೀರಿಸಲು ಶ್ರಮಿಸಬೇಕು. ಅದನ್ನೇ ಆದ್ಯತೆಯಾಗಿಸಿಕೊಂಡರೆ



ಮತದಾರರಿಗೆ ಕೃತಜ್ಞತೆ ಸಲ್ಲಿಸಿದಂತಾಗುತ್ತದೆ ಎಂದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಎಸ್.ಮಂಜೇಗೌಡ ಅವರು ಮಾತನಾಡಿ, ಬೈರಾಪುರ ಗ್ರಾಮ ಪಂಚಾಯಿತಿಯು ಈ ಹಿಂದಿನಿಂದಲೂ ರಾಜಕೀಯವಾಗಿ ಸುದ್ದಿಯಲ್ಲಿರುತ್ತದೆ. ಆದರೂ ಕೂಡ ಅಧ್ಯಕ್ಷರು-ಉಪಾಧ್ಯಕ್ಷರು ಹಾಗು ಎಲ್ಲಾ ಸದಸ್ಯರು ಸಹಕಾರದಿಂದ ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹೇಮಾ ಮಂಜೇಗೌಡ, ಉಪಾಧ್ಯಕ್ಷೆ ಸವಿತಾ ರಂಗಸ್ವಾಮಿ, ಸದಸ್ಯರಾದ ಪುಟ್ಟಗೌರಮ್ಮ, ಡಿ.ಎಸ್. ನಂಜುಂಡಪ್ಪ, ನಾಗರತ್ನ, ಗಣೇಶ್, ಮೋಹನ್ ಕುಮಾರ್, ಹಾಸನ ಕೆಎಂಎಫ್ ನಿರ್ದೇಶಕ ಪಿ.ಎಲ್.ನಿಂಗರಾಜು, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಸಿ.ವಿ.ಲಿಂಗರಾಜು, ಬೈರಾಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಪುಷ್ಪ, ಸಿ.ಡಿ. ಅಶೋಕ್ ಇತರರಿದ್ದರು.

## ಭಾರತದ ವಿರುದ್ಧ ಆಡಲ್ಲ : ಪಾಕಿಸ್ತಾನ ಅಚ್ಚರಿ ನಿರ್ಧಾರ




• ಪ್ರಜೋದಯ ವರದಿ

**ಲಾಹೋರ್ :** ಐಸಿಸಿ ಟಿ-20 ವಿಶ್ವಕಪ್‌ಗೆ ದಿನಗಣನೆ ಆರಂಭವಾಗಿದೆ. ಈ ನಡುವೆ ಪಾಕಿಸ್ತಾನ ಕ್ರಿಕೆಟ್ ತಂಡ ಫೆಬ್ರುವರಿ 15ರಂದು ಭಾರತದ ವಿರುದ್ಧ ನಡೆಯಲಿರುವ ಲೀಗ್ ಪಂದ್ಯವನ್ನು ಬಹಿಷ್ಕರಿಸಿರುವುದಾಗಿ ಮಾಹಿತಿ ಹಂಚಿಕೊಂಡಿದೆ.

ಭದ್ರತಾ ಕಾರಣಗಳಿಂದ ಬಾಂಗ್ಲಾದೇಶ ತಂಡ ಭಾರತದಲ್ಲಿ ಆಯೋಜನೆಗೊಂಡಿದ್ದ ತನ್ನ ಪಂದ್ಯಾವಳಿಗಳನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸುವಂತೆ ಮನವಿ ಸಲ್ಲಿಸಿತ್ತು. ಆದರೆ, ಬಾಂಗ್ಲಾ ತಂಡದ ಮನವಿಯನ್ನು ತಿರಸ್ಕರಿಸಿದ ಐಸಿಸಿ, ಬಾಂಗ್ಲಾ ಕ್ರಿಕೆಟ್ ತಂಡದ ಬದಲು ಸ್ಕಾಟ್ಲೆಂಡ್ ತಂಡಕ್ಕೆ ಟೂರ್ನಿಯಲ್ಲಿ ಆಡುವ ಅವಕಾಶ ನೀಡಿದೆ. ಈ ಹಿನ್ನೆಲೆಯಲ್ಲಿ ಐಸಿಸಿ ವಿರುದ್ಧದ ಪ್ರತಿಭಟನೆಯ ಸಂಕೇತವಾಗಿ ಪಾಕಿಸ್ತಾನ ಈ ನಿರ್ಧಾರ ತೆಗೆದುಕೊಂಡಿದೆ.

ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಂಡಿರುವ ಪಾಕಿಸ್ತಾನ ಸರ್ಕಾರ, ಪಾಕಿಸ್ತಾನ ಕ್ರಿಕೆಟ್ ತಂಡವು ಐಸಿಸಿ ವಿಶ್ವಕಪ್ ಟಿ20 2026 ರಲ್ಲಿ ಭಾಗವಹಿಸಲು ಅನುಮೋದನೆ ನೀಡಲಾಗಿದೆ. ಆದರೆ ಫೆಬ್ರವರಿ 15ರಂದು ಭಾರತದ ವಿರುದ್ಧ ನಿಗದಿಯಾಗಿರುವ ಪಂದ್ಯದಲ್ಲಿ ಪಾಕಿಸ್ತಾನ ತಂಡ ಮೈದಾನಕ್ಕೆ ಇಳಿಯುವುದಿಲ್ಲವೆಂದು ತಿಳಿಸಿದೆ.

## ಭಾರತ ವೆನೆಜುವೆಲಾದಿಂದ ತೈಲ ಖರೀದಿಸಲಿದೆ : ಟ್ರಂಪ್

• ಪ್ರಜೋದಯ ವರದಿ

ನ್ಯೂಯಾರ್ಕ್: ಭಾರತವು ಇರಾನ್ ಬದಲಿಗೆ ವೆನೆಜುವೆಲಾದಿಂದ ಕಚ್ಚಾತೈಲವನ್ನು ಖರೀದಿ ಮಾಡಲಿದೆ ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.

ವೆನೆಜುವೆಲಾಗೆ ನೀಡಿರುವ ಸಾಲವನ್ನು ಚೀನಾ ವಾಪಸ್ ಪಡೆಯಲಿದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಟ್ರಂಪ್, ತೈಲ ಖರೀದಿಗೆ ಸಂಬಂಧಿಸಿದಂತೆ ವೆನೆಜುವೆಲಾದೊಂದಿಗೆ ಚೀನಾ ಒಪ್ಪಂದ ಮಾಡಿಕೊಳ್ಳುವುದಾದರೆ ಅದನ್ನು ನಾವು ಸ್ವಾಗತಿಸುತ್ತೇವೆ. ಭಾರತವೂ ಇರಾನ್ ಬದಲಾಗಿ ವೆನೆಜುವೆಲಾದಿಂದ ತೈಲ ಖರೀದಿಗೆ ಮುಂದಾಗಿದೆ. ಈ ಸಂಬಂಧ ಒಪ್ಪಂದ ಚಾಲ್ತಿಯಲ್ಲಿದೆ ಎಂದು ಹೇಳಿದರು.

ಟ್ರಂಪ್ ಹೇಳಿಕೆಯ ಬಗ್ಗೆ ಭಾರತ ಸರ್ಕಾರ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಭಾರತವು 2019ರವರೆಗೂ ಇರಾನ್‌ನಿಂದ ಕಚ್ಚಾತೈಲ ಖರೀದಿಸುವ ಪ್ರಮುಖ ರಾಷ್ಟ್ರವಾಗಿತ್ತು. ಇರಾನ್ ಮೇಲೆ ಅಮೆರಿಕ ನಿರ್ಬಂಧ ಹೇರಿದ ಬಳಿಕ ಆಮದು ಪ್ರಮಾಣ ಗಮನಾರ್ಹವಾಗಿ ತಗ್ಗಿತು. ನಿರ್ಬಂಧ ವಿಧಿಸಿರುವ ದೇಶಗಳಿಂದ ಕಚ್ಚಾತೈಲ ಖರೀದಿಯನ್ನು ನಿಲ್ಲಿಸುವಂತೆ ಪ್ರಮುಖ ಆಮದುದಾರ ದೇಶಗಳಿಗೆ ಅಮೆರಿಕ ಒತ್ತಡ ಹೇರುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾತೈಲ ಖರೀದಿಸುತ್ತಿದೆ. ಇದೇ ಕಾರಣಕ್ಕಾಗಿ ಅಮೆರಿಕಾವು ಭಾರತದ ಮೇಲೆ ಶೇ.50ರಷ್ಟು ಸುಂಕ ವಿಧಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾ ಹಂಗಾಮಿ ಅಧ್ಯಕ್ಷ ಡೆಲ್ಸಿ



ರಾಡ್ರಿಗಸ್ ಅವರೊಂದಿಗೆ ಶುಕ್ರವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದರು. ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧವನ್ನು ವೃದ್ಧಿಸುವ ಬಗ್ಗೆ ಪರಸ್ಪರ ಸಹಮತ ವ್ಯಕ್ತಪಡಿಸಿದ್ದರು.

**ಮೋದಿ ಸರ್ಕಾರದ ವಿರುದ್ಧ ಕೈ ವಾಗ್ದಾಳಿ**

ನವದೆಹಲಿ: ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಭಾನುವಾರ ವಾಗ್ದಾಳಿ ನಡೆಸಿದೆ.

ನಮ್ಮ ಸರ್ಕಾರ ಏನು ಮಾಡಿದೆ ಅಥವಾ ಏನು ಮಾಡಲಿದೆ ಎಂಬ ಮಾಹಿತಿ ನೀಡುವುದನ್ನು ಅಮೇರಿಕಾ ಅಧ್ಯಕ್ಷರು ಮುಂದುವರಿಸಿದ್ದಾರೆಂದು ಕಾಂಗ್ರೆಸ್ ಹೇಳಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಟ್ರಂಪ್ ಅವರು ಆಪರೇಷನ್ ಸಿಂಧೂರ ಕಾರ್ಯಾಚರಣೆಯನ್ನು ನಿಲ್ಲಿಸಲಾಗಿದೆ ಎಂದು ಹೇಳಿದ್ದರು. ಭಾರತವು ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸಿದೆ ಎಂದೂ ಹೇಳಿದ್ದರು. ಈಗ ವೆನೆಜುವೆಲಾದಿಂದ ತೈಲ ಖರೀದಿಗೆ ಒಪ್ಪಂದವಾಗಿದೆ ಎಂದು ಹೇಳಿದ್ದಾರೆ. ನಮ್ಮ ಸರ್ಕಾರದ ನಡೆಯ ಕುರಿತು ಮಾಹಿತಿ ನೀಡುವುದನ್ನು ಅವರು ಮುಂದುವರಿಸಿದ್ದಾರೆ ಎಂದು ಎಕ್ಸ್ ನಲ್ಲಿ ಹೇಳಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K